


ಬಿಡಿ ಪ್ರತಿ: ರೂ. 10.00

# ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 28
ಸಂಚಿಕೆ - 11
ಆಗಸ್ಟ್ - 2011

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.

**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

## ಈ ಸಂಚಿಕೆಯಲ್ಲಿ.....

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ನಮ್ಮ ನಿಮ್ಮಲ್ಲಿ | **ಶಿವಕುಮಾರ್** | 4 |
| ಗುಪ್ತ ನಿಧಿ | **ಸಿ.ಆರ್. ಸತ್ಯ** | 9 |
| ಮುಖ್ಯ ಮಂತ್ರಿಗಳು.... | **ಗಣೇಶ ಹೆಗ್ಗಡೆ** | 12 |
| ದಾರೀಲಿ ಹೋಗೋ.... | **ಎಚ್. ಶಾಂತರಾಜ ಐತಾಳ್** | 16 |
| ಭಾರತ ದರ್ಶನ | **ಶರತ್ ಕಡ್ತೂರು** | 20 |
| ಮಾಸ ಭವಿಷ್ಯ | **ಸತ್ಯೋತ್ತಮಾಚಾರ್ಯ** | 22 |
| ದೇವರ ಬವಣೆ | **ಆನಂದ** | 25 |
| ತುಂತುರು | **ದಂನಾಆ** | 26 |
| ಹೊರೆಯಲ್ಲದ ನೆರೆ | **ವಾಣೀ ಸುರೇಶ್** | 27 |
| ಬದುಕು ರೂಪಿಸಿದವರು.. | **ಗುರು** | 31 |
| ಕುಂಬಳಕಾಯಿ ಸಾಕ್ಷ್ಯ | **ನಾಗೇಶ ಹೆಗಡೆ** | 36 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 39 |

**ಮುಖಪುಟ ವ್ಯಂಗ್ಯಚಿತ್ರ - ಸುರೇಂದ್ರ, ಇಂಟರ್‌ನೆಟ್‌ನಿಂದ**

*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*
*ಪ್ರಕಾಶಕರು :* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

## ಅಪರಂಜಿ ಕಿಡಿ

● ಪ್ರಕಾಶ್



ಸಂವಿಧಾನ ಚೌಕಟ್ಟಿನಡಿ ಕಾರ್ಯ ನಿರ್ವಹಿಸಬೇಕು – ಪ್ರಧಾನಿ

**● ಅರಣ್ಯ ರೋದನ ಅಂದರೆ ಇದೇ !!**

★★★

ಕಾರು ಸಾಲ; ವಂಚಕರ ಬಂಧನ – ಸುದ್ದಿ

**● ಅವರ ಕಾರು-ಬಾರು ಪತ್ತೆಯಾಯಿತು !!**

★★★

ಸ್ಪೋರ್ಟ್ಸ್ ಯುಟಿಲಿಟಿ ವೆಹಿಕಲ್‌ಗಳಲ್ಲಿ ಕ್ರಾಂತಿಯನ್ನು ಸಾಧಿಸಲು ಒಂದು ಅತ್ಯಾಕರ್ಷಕ ಬಿಸಿನೆಸ್ ಸದವಕಾಶ – ಟಾಟಾ ಜಾಹಿರಾತು

**● ಕನ್ನಡಕ್ಕೆ TATA !!**

★★★

ಕರ್ನಾಟಕ ಪಟುಗಳ ಉದ್ದೀಪನ ಆರೋಪ – ಕ್ರೀಡಾ ಸುದ್ದಿ

**● ದುರ್ಭಿಕ್ಷದಲ್ಲಿ ಅಧಿಕ ಮಾಸ !!**

★★★

ಪೊಲೀಸರ ವೇಷ, ವಂಚಕನ ಸೆರೆ – ಸುದ್ದಿ

**● ಮಾಮೂಲು ಕೇಳಲಿಲ್ಲವೇನೋ ?!**

★★★

ತಾಳಗುಪ್ಪಕ್ಕೆ ರೈಲು ತಡವೇಕೆ? – ಪತ್ರಿಕೆ

**● ಇನ್ನೂ ತಾಳಬೇಕು !!**

★★★

ಲಂಚ; ಮಹಿಳಾ ಅಧಿಕಾರಿಗೆ ಜೈಲು – ಸುದ್ದಿ

**● ಸಮಾನತ್ವದ ಆರೋಪ ?!**

★★★



**ಕೊರವಂಜಿ ಅಪರಂಜಿ ಟ್ರಸ್ಟ್**

ಆಯೋಜಿಸಿರುವ

## ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆ 2011

**ನಾಡಿನ ಪ್ರಖ್ಯಾತ ನಗೆಬರಹಗಾರ ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜಿಸಿದೆ. ಸ್ಪರ್ಧೆಯ ನಿಯಮಗಳು ಹೀಗಿವೆ.**

1. ಒಬ್ಬರು ಒಂದು ಲೇಖನವನ್ನು ಮಾತ್ರ ಕಳುಹಿಸಬೇಕು
2. ಲೇಖನ ಫುಲ್‌ಸ್ಕೇಪ್ ಹಾಳೆಯಲ್ಲಿ 3 ರಿಂದ 4 ಪುಟಗಳಿರಬೇಕು.
3. ಉತ್ತಮವಾದ ನಗೆಲೇಖನಕ್ಕೆ ಪ್ರಥಮ (ರೂ.1000/-), ದ್ವಿತೀಯ (ರೂ.750/-) ಹಾಗೂ ಮೂರನೇ (ರೂ.500/-) ಬಹುಮಾನಗಳಿರುತ್ತವೆ.
4. ಬಹುಮಾನಿತ ಲೇಖನಗಳನ್ನು ಅಪರಂಜಿ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು.
5. ತೀರ್ಪುಗಾರರ ಮೆಚ್ಚುಗೆ ಪಡೆದ ನಗೆ ಲೇಖನಗಳನ್ನು ಅಪರಂಜಿಯಲ್ಲಿ ಕ್ರಮೇಣ ಬಳಸಿಕೊಳ್ಳಲಾಗುವುದು.
6. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ, ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಹಾಗೂ ಲೇಖನಗಳನ್ನು ವಾಪಸ್ ಕಳುಹಿಸಲಾಗುವುದಿಲ್ಲ.
7. ಲೇಖನಗಳನ್ನು : ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, 'ಸುಕೇಶವ' ನಂ. 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿ.ಟಿ.ಎಂ. ಬಡಾವಣೆ 1ನೇ ಹಂತ, ಬೆಂಗಳೂರು – 560 068 ಈ ವಿಳಾಸಕ್ಕೆ ಕಳುಹಿಸಬೇಕು.
8. ಲೇಖನಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 31.10.2011.

# “ನಮ್ಮ ನಿಮ್ಮಲ್ಲಿ”

**ಖ್ಯಾ**ತ ನಾಟಕಕಾರ ಮಾನ್ಯ ಬಿ. ಪುಟ್ಟಸ್ವಾಮಯ್ಯ ನವರು ನಮ್ಮ ತಂದೆ ರಾ.ಶಿ.ಯವರ ಆಪ್ತ ಗೆಳೆಯರು. ನಮ್ಮ ಮನೆಯ ಹತ್ತಿರವೇ ಅವರ ಮನೆ. ಒಮ್ಮೆ ಅವರು ಒಂದಷ್ಟು ಇಂಗ್ಲಿಷ್ ಪುಸ್ತಕಗಳನ್ನು ತಂದು ನಮ್ಮ ತಂದೆಯವರಿಗೆ ಕೊಟ್ಟು 'ಇದನ್ನೆಲ್ಲಾ ನೀನು ಓದಲೇ ಬೇಕು' ಅಂತ ಆಗ್ರಹಪೂರ್ವಕವಾಗಿ ಹೇಳಿ ಹೋದರು. ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ ಬೆಳಕು ಕಂಡ ಓಬೀರಾಯನ ಕಾಲದ ಪುಸ್ತಕಗಳವು. ಮೂಲ ಸಂಸ್ಕೃತದಲ್ಲಿದ್ದ ಕಥೆಗಳನ್ನು F.W. Bain ಎಂಬ ಆಂಗ್ಲ ಬರಹಗಾರ ಇಂಗ್ಲೀಷಿಗೆ ಭಾಷಾಂತರ ಮಾಡಿದ್ದ. ಈ ಗೊಂಚಲಿನಲ್ಲಿದ್ದ ಒಂದು ಪುಸ್ತಕ The Ashes of a God (ಸಂಸ್ಕೃತದಲ್ಲಿ – ಸ್ಮರಭಸ್ಮ ಸಂಜೀವಿನೀ ತುಷ್ಟಿ). ನಮ್ಮ ತಂದೆ ಅವುಗಳನ್ನು ಓದಿದ ನಂತರ ಮನೆ ಮಕ್ಕಳ ಸರದಿ. ನಾವೆಲ್ಲಾ ಈ ಪುಸ್ತಕಗಳನ್ನು ಬಹು ಆಸಕ್ತಿಯಿಂದ ಓದಿ ಮುಗಿಸಿದೆವು. ಪುರಾಣದ ಕಾಲದ ರಾಜಕುಮಾರ ಕುಮಾರಿಯರು, ಸ್ವರ್ಗಲೋಕದ ದೇವತೆಗಳು, ಕೈಲಾಸದಲ್ಲಿರುವ ಶಿವ ಪಾರ್ವತಿಯರು ಇವರೆಲ್ಲಾ ಈ ಕಥೆಗಳ ಪ್ರಮುಖ ಪಾತ್ರಗಳು. ಈ ಮೂಲಕಥೆಗಳು ಬೇಯ್ನ್ ಮಹಾಶಯನಿಗೆ ದೊರೆತ ಸಂದರ್ಭವೇ ಕುತೂಹಲಕಾರಿಯಾಗಿದೆ. ಬೇಯ್ನ್ ಒಬ್ಬ ಇಂಗ್ಲೀಷ್ ಯೋಧ. ಹತ್ತೊಂಭತ್ತನೆಯ ಶತಮಾನದ ಅಂತ್ಯಭಾಗದಲ್ಲಿ ಪೂನಾದ ಮಿಲಿಟರಿ ಪಾಳ್ಯವೊಂದರಲ್ಲಿ ಅಧಿಕಾರಿಯಾಗಿದ್ದವ. ಸ್ವಂತ ಓದಿನಿಂದ ಸಂಸ್ಕೃತಭಾಷೆಯನ್ನು ಕಲಿತು ಅದರಲ್ಲಿ ಅಸಾಧಾರಣ ಪಾಂಡಿತ್ಯವನ್ನು ಸಂಪಾದಿಸಿದ್ದ. ಒಮ್ಮೆ ಈತನಿಗೆ ಪೂನಾದಲ್ಲಿದ್ದ ಒಬ್ಬ ಸಂಸ್ಕೃತ ವಿದ್ವಾಂಸನೊಬ್ಬನ ಪರಿಚಯವಾಯಿತು. ಬೇಯ್ನ್ ಹೇಳುತ್ತಾನೆ – 'ಆ ಬ್ರಾಹ್ಮಣ ಅತ್ಯಂತ ಸ್ನೇಹಮಯಿ. ಹಿಂದೆ ನಾನೆಂದೋ ಮಾಡಿದ್ದ ಸಣ್ಣ ಸಹಾಯವೊಂದನ್ನು ಆತ ಸದಾ ನೆನೆದು ನನ್ನನ್ನು ಕೊಂಡಾಡುತ್ತಿದ್ದ. ಒಮ್ಮೆ ಭಯಂಕರ ಪ್ಲೇಗ್ ಪಿಡುಗು ಪಟ್ಟಣವನ್ನು ಆವರಿಸಿತು. ಆ ವಿದ್ವಾಂಸನ ಸಂಸಾರವೆಲ್ಲಾ ಆ ಉಪದ್ರವದಲ್ಲಿ ಕಾಲವಾದರು. ಪಂಡಿತನೂ ಸಹ ಪ್ಲೇಗ್‌ನಿಂದ ಬಳಲಿದ್ದ. ಒಮ್ಮೆ ಆತನಿಂದ ನನಗೆ ತುರ್ತಿನ ಕರೆ ಬಂತು. ತ್ವರೆಯಿಂದ ನಾನು ಅವನಲ್ಲಿಗೆ ಹೋದೆ. ಆತ ನನ್ನ ಕೈಯ್ಯಲ್ಲಿ ಒಂದು ತಾಳೆಗರಿಯ ಕಟ್ಟನ್ನಿಟ್ಟು 'ನಮ್ಮ ವಂಶಕ್ಕೆ ಹಿಂದಿನಿಂದ ಬಂದ ಬಳುವಳಿ ಇದು. ಈಗ ವಂಶವೇ ನಿರ್ನಾಮವಾಗುತ್ತಿರುವಾಗ ಇದಕ್ಕೆ ಬೇರೆ ಜಾಗವಿಲ್ಲ. ನೀನು ಸಂಸ್ಕೃತ ಬಲ್ಲವನು. ಇದು ನಿನ್ನೊಂದಿಗಿರಲಿ' ಎಂದು ಹೇಳಿ ಆ ವಿದ್ವಾಂಸ ಅಸು ನೀಗಿದ.

ಬೇಯ್ನ್‌ಗೆ ಆ ತಾಳೆಗರಿಯ ಕಟ್ಟಿನಲ್ಲಿ ಅನರ್ಘ್ಯ ರತ್ನಗಳೇ ಸಿಕ್ಕಿದವು. ಭೃಂಗೀಶ ಸುಧಾಭೃತ್ಪುಷ, ಸ್ವಪ್ರೋ ಇವೇ ಮುಂತಾದ ಅತ್ಯಂತ ರಮ್ಯತೆಯಿಂದ ಹೆಣೆದ ಪ್ರಣಯದ ಕಥೆಗಳು ಆ ಕಟ್ಟಿನಲ್ಲಿದ್ದವು. ಜೀವನದ ಸಾಗರದ ಬೃಹತ್ ಅಲೆಗಳ ಅನಿರೀಕ್ಷಿತ ಹೊಯ್ದಾಟ ತುಯ್ದಾಟದಲ್ಲಿ ಪ್ರಣಯದ ಹಾಯಿಪಟದ ನವಿರಾದ ನೆರವಿನಿಂದ ದಡಸೇರುವ ಕಲೆಯನ್ನು ತಿಳಿಸುವ ಕಥಾನಕಗಳಿವು. ಯೌವನದ ಮೆಟ್ಟಲೇರಿದ್ದ ನಮ್ಮೆಲ್ಲರಿಗೆ ಸಹಜವಾಗಿಯೇ ಈ ಪುಸ್ತಕಗಳು ಬಹು ಅಪ್ಯಾಯಮಾನವಾದವು.



ಎಲ್ಲ ಪುಸ್ತಕಗಳೂ ಬಹು ಮನೋಜ್ಞವಾಗಿದ್ದರೂ The Ashes of a God ಪುಸ್ತಕವನ್ನು ಮಾತ್ರ ನಾನು ಮರೆಯಲಾಗಲೇ ಇಲ್ಲ. ಇಪ್ಪತ್ತು ವರ್ಷಗಳ ಹಿಂದೆ ನಮ್ಮ ಅಕ್ಕ ಕಮಲಾ ಅದನ್ನು ನನ್ನಿಂದ ಎರವಲು ಪಡೆದಿದ್ದು ಅದು ಅವರ ಮನೆಯಲ್ಲೇ ಸದೇಹಮುಕ್ತಿಯನ್ನು ಪಡೆದಿತ್ತು. ಮೊನ್ನೆ ಆ ಪುಸ್ತಕವನ್ನು ಪುನಃ ಓದುವ ಮನಸ್ಸಾಗಿ ಬೇರೆ ಮಾರ್ಗವಿಲ್ಲದೇ ಗೂಗಲ್‌ಗೆ ಶರಣಾದೆ. ನನ್ನ ಅದೃಷ್ಟ, ಲಾಸ್ ಏಂಜಲೀಸ್‌ನ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿನ ಪುಸ್ತಕಭಂಡಾರದಲ್ಲಿ ಈ ಪುಸ್ತಕದ ಡಿಜಿಟಲ್ ರೂಪ ಸಂಗ್ರಹವಾಗಿತ್ತು. ಯಾರು ಬೇಕಾದರೂ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳುವ ಸೌಲಭ್ಯವನ್ನು ಮೈಕ್ರೋಸಾಫ್ಟ್ ದತ್ತಿಯೊಂದರ ಸಹಾಯದಿಂದ ಈ ಪುಸ್ತಕಭಂಡಾರ ಓದುಗರಿಗೆ ನೀಡಿತ್ತು. ಡೌನ್‌ಲೋಡ್ ಮಾಡಿಕೊಂಡು ಮತ್ತೊಮ್ಮೆ ಪುಸ್ತಕವನ್ನು ಓದಿದೆ.

ರುರು ಒಬ್ಬ ರಾಜ. ತನ್ನ ರಾಣಿ ತನಗೆ ದ್ರೋಹಬಗೆದಳೆಂಬ ಕಾರಣದಿಂದ ಈ ರಾಜ ಸಮಸ್ತ ಸ್ತ್ರೀಕುಲವನ್ನೇ ದ್ವೇಷಿಸಲು ಪ್ರಾರಂಭಿಸಿದ. ಅವನ ರಾಜ್ಯದಲ್ಲಿ ಯಾವ ತರುಣಿಯೂ ಈ ರಾಜನ ದುಷ್ಟ ಕಾಮನೆಗೆ ಬಲಿಯಾಗದೇ ಇರಲಿಲ್ಲ. ತ್ರಿಶೋಧದಿ ಈ ರಾಜನ ಮಂತ್ರಿ. ಮಂತ್ರಿಯ ಮಡದಿ ವತ್ಸಾತರಿ. ಅಪೂರ್ವ ರೂಪ ಅವಳದ್ದು. ರಾಜನ ಕಣ್ಣಿಗೆ ಬೀಳದೇ ಇರಲಿ ಎಂದು ತ್ರಿಶೋಧದಿ ತನ್ನ ಮಡದಿಯನ್ನು ಭದ್ರ ಕಾವಲಿದ್ದ ತನ್ನ ತೋಟದಲ್ಲಿ ಮರೆಸಿಟ್ಟಿದ್ದ. ಆದರೆ ವಿಧಿ ಬರಹ ತಪ್ಪಿಸಲು ಸಾಧ್ಯವೇ. ರಾಜ ಬೇಟೆಗೆ ಹೋಗಿದ್ದಾಗ ಅವನ ಮುತ್ತಿನ ಹಾರವನ್ನು ಹದ್ದೊಂದು ಕಚ್ಚಿಕೊಂಡು ಹೋಯಿತು. ರಾಜ ಅದನ್ನಟ್ಟಿಕೊಂಡು ಹೋಗುತ್ತಿದ್ದಂತೆ ಎತ್ತರದ ಗೋಡೆಯಿದ್ದ ತೋಟವೊಂದರ ಆಚೆಬದಿಯಲ್ಲಿ ಹಾರವನ್ನು ಬೀಳಿಸಿ ಹದ್ದು ಹಾರಿಹೋಯಿತು. ರಾಜ ಹೊರಗಿನ ಮರವೊಂದನ್ನು ಏರಿ ಗೋಡೆಯ ಆಚೆಗೆ ದೃಷ್ಟಿ ಹಾಯಿಸಿದ. ಅಪ್ರತಿಮ ರೂಪಸಿ ವತ್ಸಾತರಿ ಪುಟ್ಟಬಂಡೆಯೊಂದರ ಮೇಲೆ ಕುಳಿತಿದ್ದಳು. ಕೇಳಬೇಕೆ. ರಾಜ ತೋಟದೊಳಗೆ ಧುಮುಕಿ ಅವಳ ಬಳಿ ಸಾರಿದ. ವತ್ಸಾತರಿ ಎಷ್ಟು ಸುಂದರಿಯೋ ಅಷ್ಟೇ ಪತಿವ್ರತೆ. ಪರಪುರುಷರನ್ನು ಕಣ್ಣೆತ್ತಿಯೂ ನೋಡಳು. ರಾಜ ಬಂದಿದ್ದರಿಂದ ಅವಳ ಈ ವ್ರತಕ್ಕೆ ಭಂಗವೇನೂ ಆಗಲಿಲ್ಲ. ಏಕೆಂದರೆ ಅವಳ ಕಣ್ಣುಗಳು ತಮ್ಮ ಕಾಂತಿಯನ್ನು ಹುಟ್ಟಿನಿಂದ ಕಳೆದುಕೊಂಡಿದ್ದವು. ರಾಜ ಅವಳ ಬಳಿಸಾರಿ ಅವಳ ಮನವೊಲಿಸಲು ಯತ್ನಿಸಿದ. ವತ್ಸಾತರಿ ರಾಜನ ಮಾತಿಗೆ ಮರುಳಾಗಲಿಲ್ಲ. ಆ ಸಮಯಕ್ಕೆ ಸರಿಯಾಗಿ ತ್ರಿಶೋಧದಿ ತೋಟದ ಬಾಗಿಲಿನಲ್ಲಿ ಕಾಣಿಸಿಕೊಂಡ.

Trishodadhi stood for a single instant, silent, gazing at that pair with eyes that were suddenly filled to the very brim, first with amazement, and then with anguish, and next with anger, and finally with ice. And then he turned away, saying slowly to himself: Miserable wretches, what after all is the use of astonishment, or pity for myself, or even wrath with you?...................... And he went straight away, there and then, never to return. And abandoning his wife and his office and his home, counting them all as grass, he threw away his skin, like a snake, and becoming a pilgrim, turned his steps, without losing a single instant, to the wilderness of the Windhya hills.

ತ್ರಿಶೋಧದಿಯ ತಿರಸ್ಕಾರ ವತ್ಸಾತರಿಯನ್ನು ದಾಟಿ ಇಡೀ ಜಗತ್ತಿನ ಮೇಲೆ ಆವರಿಸಿತು. ವಿಶ್ವಾಮಿತ್ರನಂತೆ ತಪಸ್ಸು ಮಾಡಿ ಬೇರೊಂದು ಜಗತ್ತನ್ನೇ ಸೃಷ್ಟಿಸಲು ಸಂಕಲ್ಪ ಮಾಡಿದ. ಪಾಳುಬಿದ್ದ ರುದ್ರಭೂಮಿಯೊಂದನ್ನು ಸೇರಿ, ಘೋರ ತಪಸ್ಸಿಗೆ ಕುಳಿತ. ನೂರು ವರ್ಷಗಳಾದರೂ ಇವನ ತಪಸ್ಸಿಗೆ ಕೊನೆ ಕಾಣಲಿಲ್ಲ. ತ್ರಿಶೋಧದಿಯ ತಪೋಶಕ್ತಿ ಬೆಳೆಯುತ್ತ ಬೆಳೆಯುತ್ತ ಮೇರು ಪರ್ವತವನ್ನು ಮೀರಿಸಿತು. ಅತ್ತ ಸ್ವರ್ಗಲೋಕದಲ್ಲಿ ಇಂದ್ರದೇವನಿಗೆ ತನ್ನ ಸಾಥಿನದ ಚ್ಯುತಿಯ ಬಗ್ಗೆ ಚಿಂತೆ ಶುರುವಾಯಿತು. ಅಪ್ಸರೆಯರನ್ನೆಲ್ಲಾ ಒಬ್ಬೊಬ್ಬರನ್ನಾಗಿ ಕಳಿಸಿ ನೋಡಿದ. ಏನೂ ಪ್ರಯೋಜನವಾಗಲಿಲ್ಲ. ತ್ರಿಶೋಧದಿಯ ತಪಸ್ಸು ಅವ್ಯಾಹತವಾಗಿ ನಡೆದೇ ಇತ್ತು. ಕೊನೆಗೆ ಬೇರೆ ದಾರಿಗಾಣದೇ ಕೈಲಾಸದಲ್ಲಿರುವ ಮಹೇಶ್ವರನತ್ತ ಇಂದ್ರನ ನಾಯಕತ್ವದಲ್ಲಿ ದೇವತೆಗಳ ಗುಂಪು ಹೊರಟಿತು. ಮಹೇಶ್ವರ ಕರುಣೆಯಿಂದ 'ಈ ಬ್ರಾಹ್ಮಣನ ತಪಸ್ಸನ್ನು ಭಂಗಗೊಳಿಸಬೇಕಾದರೆ ಸಾಗರರಾಜನ ಮಗಳಾದ ಕಲಾವತಿಯ ಬಳಿ ಹೋಗಿ, ಈ ಸಮಸ್ಯೆಗೆ ಪರಿಹಾರವಿದ್ದರೆ ಅವಳಲ್ಲಿ ಮಾತ್ರ' ಎಂದು ಸಲಹೆ ನೀಡಿ ಅವರನ್ನು ಹಿಂದಕ್ಕೆ ಕಳಿಸಿದ. ಇಂದ್ರ ಕಲಾವತಿಯ ಬಳಿ ಸಾರಿ ತನ್ನ ಅಹವಾಲನ್ನು ಮಂಡಿಸಿದ. ತನ್ನ ಅಪ್ಸರೆಯರೆಲ್ಲಾ ವಿಫಲರಾಗಿದ್ದನ್ನೂ ತಿಳಿಸಿದ. ಕಲಾವತಿ ಮೊದಲು ಸ್ವಲ್ಪ ಹಿಂಜರಿದಂತೆ ತೋರಿಕೆ ಮಾಡಿ ಅನಂತರ ಇಂದ್ರನ ಕೋರಿಕೆಗೆ ಒಪ್ಪಿದಳು.

And suddenly she laughed, and said " ............ Come now, we will go together, for I shall need thee to assist me, and overthrow this mutterer, together with the mountain of his merit, by the favour of the Elephant-headed deity; for I think, that there will be very little difficulty in diverting his attention from his penance, after all : so little, that as I will show thee by experiment, it is not I that will upset him, but, aided by me, he will simply overturn himself."

ತ್ರಿಶೋಧದಿಯ ತಪಸ್ಸು ಮುಂದುವರಿದಿತ್ತು. ಸ್ವರ್ಗಲೋಕದ ಅಪ್ಸರೆಯರೆಲ್ಲಾ ಒಬ್ಬೊಬ್ಬರಾಗಿ ಬಂದು ಸೋತುಹೋದದ್ದು ತ್ರಿಶೋಧದಿಯ ಹೆಮ್ಮೆಯನ್ನು ಹೆಚ್ಚಿಸಿತ್ತು. ಇಂದ್ರ ಇನ್ನು ಯಾರನ್ನು ಕಳಿಸುತ್ತಾನೆ ನೋಡೋಣ ಅಂತ ಸವಾಲಿನ ಮನೋಭಾವದಿಂದಲೇ ಅವನು ತನ್ನ ತಪಸ್ಸನ್ನು ಮುಂದುವರಿಸಿದ್ದ. ಇಷ್ಟುಹೊತ್ತಿಗೆ ಪಕ್ಕದ ಕಾಡಿನಿಂದ ದೈತ್ಯಾಕಾರದ ಆನೆಯೊಂದು ಮರಗಳನ್ನು ಉರುಳಿಸುತ್ತಾ ರುದ್ರಭೂಮಿಗೆ ಕಾಲಿಟ್ಟಿತು. ಕುಳಿತಿದ್ದ ತ್ರಿಶೋಧದಿಯನ್ನು ದಾಟಿ ಅವನ ಬೆನ್ನಹಿಂದೆ ಸ್ವಲ್ಪ ದೂರದಲ್ಲಿದ್ದ ಆಲದ ಮರದ ಬಳಿ ನಿಂತು, 'ನನ್ನ ಶಾಪ ವಿಮೋಚನೆಗಾಗಿ ಇಷ್ಟು ಕಾಲ ನಾನು ಹುಡುಕುತ್ತಿರುವ ಆಲದ ಮರ ನೀನೇ ಏನು?' ಎಂದು ಕೇಳಿತು. ಆ ಆಲದ ಮರ, 'ನನ್ನ ಶಾಪ ವಿಮೋಚನೆಗಾಗಿ ನಾನು ಕಾಯುತ್ತಿರುವ ದೈತ್ಯ ಸಲಗ ನೀನು ತಾನೆ?' ಎಂದು ಮಾರ್ನುಡಿಯಿತು. ತನ್ನ ಮಹಾತಪಸ್ಸಿನ ಪ್ರಭಾವದಿಂದ ತನಗೆ ಈ ಪ್ರಾಣಿ ಮತ್ತು ವೃಕ್ಷದ ಸಂಭಾಷಣೆ ಅರ್ಥವಾಗುತ್ತಿದೆ ಎಂದು ಭಾವಿಸಿ ತ್ರಿಶೋಧದಿ ಅವುಗಳ ಮಾತಿಗೆ ಕಿವಿಗೊಟ್ಟ.

ಆನೆ ಮುಂದುವರಿಸಿತು. 'ಹೇ ಆಲದ ಮರವೇ ಕೇಳು. ಬಹು ಹಿಂದೆ ನಾನು ರುರು ಎಂಬ ರಾಜನಾಗಿದ್ದೆ. ಯಾವುದೋ ಕೆಟ್ಟಘಳಿಗೆಯಲ್ಲಿ ನನಗೆ ಸ್ತ್ರೀಕುಲವನ್ನೇ ದ್ವೇಷಿಸುವ



ದುರ್ಬುದ್ಧಿ ಬಂತು. ಆಂದಿನಿಂದ ಸ್ತ್ರೀಲಂಪಟನಾದೆ. ಪಾಪ ನನ್ನ ಮಂತ್ರಿ ತ್ರಿಶೋಧದಿಯ ಮಡದಿಯ ಮೇಲೇ ನನ್ನ ಕೆಟ್ಟದೃಷ್ಟಿ ಬಿತ್ತು. ಅವಳ ಮೇಲೆ ನನಗೆ ಅತೀವ ಮೋಹ ಉಂಟಾಯಿತು. ಆಕೆಯೋ ಮಹಾ ಪತಿವ್ರತೆ. ನಾನು ಎಷ್ಟು ಮನವೊಲಿಸುವ ಪ್ರಯತ್ನ ನಡೆಸಿದರೂ ಆಕೆ ನನ್ನ ಮಾತಿಗೆ ಕಿವಿಗೊಡಲಿಲ್ಲ...' ಎಂದು ತನ್ನೆಲ್ಲಾ ವೃತ್ತಾಂತವನ್ನು ಬಹು



ವಿವರವಾಗಿ ಹೇಳತೊಡಗಿತು. ತ್ರಿಶೋಧದಿ ಮೈಯೆಲ್ಲಾ ಕಿವಿಯಾಗಿ ಆನೆಯ ಮಾತನ್ನು ಬಹು ಆಸಕ್ತಿಯಿಂದ ಕೇಳಿಸಿಕೊಳ್ಳತೊಡಗಿದ.

ಆನೆ ಮುಂದುವರೆದು, 'ಆಕೆಯ ಬಳಿ ನಾನಿದ್ದದ್ದನ್ನು ತ್ರಿಶೋಧದಿ ಅಕಸ್ಮಾತ್ತಾಗಿ ಕಂಡ ತಕ್ಷಣ ಆತ ಎಲ್ಲವನ್ನೂ ತ್ಯಜಿಸಿ ಕಾಡಿಗೆ ನಡೆದ. ಮತ್ತೆ ಅವನು ಎಲ್ಲಿಯೂ ಕಾಣಿಸಿಕೊಳ್ಳಲಿಲ್ಲ. ವತ್ಸಾತರಿ ಮಾತ್ರ ತನ್ನ ಗಂಡನ ಸ್ಮರಣೆಗೆ ನಿಷ್ಠಳಾಗಿದ್ದಳು. ಅವಳನ್ನು ಗೆಲ್ಲಲು ನಾನು ಪ್ರಯತ್ನ ಮಾಡುತ್ತಲೇ ಇದ್ದೆ. ಕೊನೆಗೆ ತ್ರಿಶೋಧದಿ ಅರಮನೆಗೆ ಬಂದಿದ್ದು ನನ್ನ ಬಂಧಿಯಾಗಿದ್ದಾನೆಂದು ಆಕೆಯನ್ನು ನಂಬಿಸಿ ಬಲವಂತದಿಂದ ಆಕೆಯನ್ನು ಅರಮನೆಗೆ ಹೊತ್ತು ತಂದೆ. ಆ ಆಘಾತದಿಂದಲೇ ಆಕೆಯ ಪ್ರಾಣ ಪಕ್ಷಿ ಹಾರಿಹೋಯಿತು. ಆ ಪಾಪದಿಂದ ನನಗೆ ಈ ಆನೆಯ ಜನ್ಮ ಬಂದಿತು. ಯಾವನೋ ಒಬ್ಬ ಋಷಿ ನನ್ನ ಮೇಲೆ ಕರುಣೆ ತೋರಿ ನನಗೆ ಈ ಶಾಪಕ್ಕೆ ವಿಮೋಚನೆಯನ್ನು ಸೂಚಿಸಿದ ನನ್ನ ವೃತ್ತಾಂತವನ್ನು ಒಂದು ನಿರ್ದಿಷ್ಟವಾದ ಆಲದ ಮರಕ್ಕೆ ತಿಳಿಸಿದರೆ ನನ್ನ ಶಾಪ ಕಳೆಯುವುದೆಂದು ಹೇಳಿದ. ನನ್ನ ಅದೃಷ್ಟ, ನೀನು ಇಂದು ದೊರಕಿದೆ... ಹೇ ನನ್ನ ಶಾಪ ವಿಮೋಚನೆ ಆಯಿತು ನಾನಿನ್ನು ರುರು' ಎನ್ನುತ್ತಾ ಆನೆಯ ರೂಪವನ್ನು ಕಳೆದುಕೊಂಡ ರಾಜ ರುರು ಕುಣಿದಾಡಲು ಪ್ರಾರಂಭಿಸಿದ. ತ್ರಿಶೋಧದಿ ಕುತೂಹಲ ತಡೆಯಲಾರದೇ ತನ್ನ ತಪಸ್ಸನ್ನು ನಿಲ್ಲಿಸಿ ಕತ್ತನ್ನು ಹಿಂದಕ್ಕೆ ತಿರುಗಿಸಿ ನೋಡಿದ. ಅವನು ನೋಡುತ್ತಿದ್ದಂತೆ ಆಲದ ಮರ ಮಾಯವಾಗಿ ಅದರ ಜಾಗದಲ್ಲಿ ವತ್ಸಾತರಿ ನಿಂತಿದ್ದಳು. ಅವಳನ್ನು ಕಂಡ ರುರು, 'ಇಂದು ನಾನೇ ಭಾಗ್ಯಶಾಲಿ. ಶಾಪ ವಿಮೋಚನೆಯೊಂದಿಗೆ ನನ್ನ ವತ್ಸಾತರಿ ಕೂಡ ನನಗೆ ದೊರಕಿದಳು' ಎಂದು ಸಂಭ್ರಮದಿಂದ

ಕೂಗಿದ. ತ್ರಿಶೋಧದಿಗೆ ತಡೆಯಲಾಗದೇ ಒಂದೇ ಜಿಗಿತದಿಂದ ವತ್ಸಾತರಿಯ ಬಳಿಗೆ ಓಡಿ, ಅವಳನ್ನು ಬಿಗಿದಪ್ಪಿ 'ಇಲ್ಲ ರುರು, ಇವಳು ನಿನ್ನವಳಲ್ಲ. ಇವಳು ನನ್ನ ಮೆಚ್ಚಿನ ಮಡದಿ' ಎಂದು ಕೂಗುತ್ತಾ ಅವಳನ್ನು ಚುಂಬಿಸಿದ. ವತ್ಸಾತರಿಯ ಕೆಂದುಟಿಗಳಿಂದ ಕಿಲಕಿಲ ನಗು ಅಲೆಅಲೆಯಾಗಿ ಹೊರಹೊಮ್ಮಿತು. ಆಶ್ಚರ್ಯದಿಂದ ತ್ರಿಶೋಧದಿ ಹಿಂದಕ್ಕೆ ಸರಿದು ತನ್ನ ಮಡದಿಯನ್ನು ದೃಷ್ಟಿಸಿ ನೋಡಿದ. ಯಾರೋ ಬೇರೆ ತರುಣಿ ಅವನನ್ನು ತಿರಸ್ಕಾರದಿಂದ ನೋಡುತ್ತಿದ್ದಳು. ಇವನನ್ನುದ್ದೇಶಿಸಿ ಕಲಾವತಿ, 'ನಿನ್ನ ಅಗಾಧವಾದ ತಪಸ್ಸನ್ನೆಲ್ಲಾ ಒಂದು ಚುಂಬನಕ್ಕಾಗಿ ಪಣವಿಟ್ಟೆ. ನಿಜಕ್ಕೂ ನಿನ್ನ ವತ್ಸಾತರಿ ಅನನ್ಯಳಾಗಿರಬೇಕು' ಎಂದು ಹೇಳಿ ಅಂತರ್ಧಾನಳಾದಳು.

And as Trishodadhi stood, struck with the thunderbolt of stupefaction, he looked, and lo! Ruru also vanished, and instead of him, Indra stood before him in the guise of a devotee. And he looked with cold eyes upon Trishodadhi, and said very slowly "O Trishodadhi, the wise strive for wisdom, and gain at least humility. But thine was a false devotion, and could not stand the test. And now, as she said, the mountain of thy merit is utterly annihilated, consumed in a single instant of impure desire like a blade of dry grass in a forest conflagration. And as experiment has proved, regret for the things of sense was not extinct in thee, and the sparks of vanity and egoism and delusion in the form of women lay lurking in the ashes of thy soul, needing only a little breeze of recollection to fan them into flame. And now thou hast allowed the sorrow for the loss of old mundane ties of long ago to conquer thy desire of emancipation and break in upon thy devotion to thy vow. And thou hast been guilty of sinister designs against heaven, springing not from the seed of true and single-hearted resignation, but selfishness and wounded vanity and malice."

ಎಂದು ಹೇಳಿ ಅವನಿಗೆ ಕೀಳು ಜನ್ಮದ ಶಾಪವಿತ್ತು ಅದೃಶ್ಯನಾದ. ಇಷ್ಟು ಈ ಕಥೆ. ಈ ಪುಸ್ತಕ ಮೊದಲು ಪ್ರಕಟವಾದದ್ದು 1911ರಲ್ಲಿ. ಇಂದಿಗೆ ಸರಿಯಾಗಿ ನೂರು ವರ್ಷಗಳಾಗಿವೆ. ನೆನೆಪಿಸಿಕೊಳ್ಳುವುದಕ್ಕೆ ಇದು ಸರಿಯಾದ ಕಾಲ ಎನ್ನಿಸುತ್ತೆ ನನಗೆ.

**ಶಿವಕುಮಾರ್**

---

**ಲೇಖಕರಲ್ಲಿ ವಿನಂತಿ**

ದಯವಿಟ್ಟು ನಿಮ್ಮ ಲೇಖನಗಳನ್ನು ನುಡಿ ಅಥವಾ ಬರಹ ತತ್ರಾಂಶ ಬಳಸಿ ಕಳುಹಿಸಿ. ಹಸ್ತಪ್ರತಿಯನ್ನು ಸ್ವೀಕರಿಸುವುದು ಕಷ್ಟವಾಗುತ್ತದೆ. ಈ ನಿಟ್ಟಿನಲ್ಲಿ ನಿಮ್ಮ ಸಹಕಾರಕ್ಕಾಗಿ ಧನ್ಯವಾದಗಳು.



# ಗುಪ್ತ ನಿಧಿ

**– ಸಿ.ಆರ್. ಸತ್ಯ**

ಇದು ನನ್ನ ಭಾವಮೈದುನ ಕೋದಂಡು ಮನೆಯಲ್ಲಿ ಮೊನ್ನೆ ಮೊನ್ನೆ ನಡೆದದ್ದು; ಅಂದರೆ ಕೇರಳದ ಅನಂತ ಪದ್ಮನಾಭಸ್ವಾಮಿ ದೇವಸ್ಥಾನದ ಗುಪ್ತನಿಧಿಯ ಬಗ್ಗೆ ಮಾಧ್ಯಮದವರು ಕೂಗಾಡುವುದಕ್ಕೆ ಸ್ವಲ್ಪ ದಿನಗಳ ಮುಂಚೆ ಅಷ್ಟೆ. ಕೋದಂಡು ಎಷ್ಟಾದರೂ ನನ್ನ ಸಂಬಂಧಿ ಅಲ್ಲವೆ? ಪಾಪ, ಅವನಿಗೂ ಸುದ್ದಿ ಮಾಧ್ಯಮದವರಿಗೂ ಬಹಳ ದೂರ. ಹಾಗಾಗಿ ಈ ಕಥೆ ಯಾರಿಗೂ ಗೊತ್ತಿಲ್ಲ. ನೀವು ಈಗ ಓದಿ ನಂಬಿದ್ರೆ ನಂಬಿ, ನಂಬದಿದ್ದರೆ ನಿಮ್ಮ ಹಣೆ ಬರಹ. ಒಟ್ಟಿನಲ್ಲಿ ಇದು ನಿಜವಾದ ನಿಜ ಕಥೆ, ಅಷ್ಟೆ.

ಕೋದಂಡು ಅವರಪ್ಪನಿಗೆ ಮುದ್ದಿನ ಒಬ್ಬನೇ ಮಗ. ಅವರಪ್ಪ ಮಾಗಡಿ ಹತ್ತಿರ ಭಾರೀ ಜಮೀನುದಾರರಾಗಿದ್ದರು. ಅವರು ಅವನಿಗೆ ಸಾಕಷ್ಟು ಆಸ್ತಿ ಬಿಟ್ಟು, ಅದನ್ನು ಚೆನ್ನಾಗಿ ಕರಗಿಸೋಕ್ಕೆ ಅನುಕೂಲವಾಗಲಿ ಅಂತ, ಒಂದು ಬಜಾರಿ ಹೆಣ್ಣಿನ ಜೊತೆ ಅವನ ಮದುವೆ ಮಾಡಿಸಿ, ಇನ್ನಷ್ಟು ಮಜಾ ಮಾಡಲಿ ಅಂತ ಕಾಲೇಜಿಗೂ ಕಳುಹಿಸದೆ ಅವನನ್ನು ಪುಂಡನಾಗಿ ಬೆಳೆಸಿ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಹಾಯಾಗಿ ಕಣ್ಮುಚ್ಕೊಂಡು ಸತ್ರು – ನೈನ್‌ಟೀಸ್ ಫಾರ್ಟೀಸ್‌ನಲ್ಲಿ. ಅವರು ಬಿಟ್ಟು ಹೋದ ಆಸ್ತಿಯಲ್ಲಿ ಒಳ್ಳೇ ಸ್ಟೀಲ್‌ನಲ್ಲಿ ಹೇಳಿಮಾಡಿಸಿದ ನಾಲ್ಕು ಅಲ್‌ಮೇರಾಗಳೂ ಇದ್ದವು.

ನಮ್ಮನೇ ಕಡೆ ನಮಗೆಲ್ಲರಿಗೂ ಇಂಗ್ಲೀಷ್ ಬರೋದು ಅಷ್ಟಷ್ಟೇ. ಹಾಗಾಗಿ ಕೋದಂಡು ಆ ನಾಲ್ಕು ಅಲಮೇರಾಗಳಿಗೆ ''ಅ'', ''ಆ'', ''ಇ'', ''ಈ'' ಅಂತ ನಾಮಕರಣ ಮಾಡಿದ. ಚಿಕ್ಕ ವಯಸ್ಸಿನಿಂದ ಈ ಅ, ಆ, ಇ, ಈ ಗಳನ್ನು ಅವನು ತೆಗದೇ ಇರಲಿಲ್ಲ! ಅವುಗಳ ಬೀಗದ ಕೈಗಳಂತೂ ಅವನ ಹತ್ತಿರವೇ ಇದ್ದವು. ಅವನ ಹೆಂಡತಿ ಬಜಾರಮ್ಮನ ಕಣ್ಣುಗಳು ಮದುವೆಯಾದಗಿನಿಂದ, ಅ, ಆ, ಇ, ಈ ಗಳ ಮೇಲೆ ಇದ್ದವು ಅಂತ ಪ್ರತ್ಯೇಕವಾಗಿ ಹೇಳಬೇಕೆ? ''ರೀ, ಅವಲ್ಲಿ ಏನಿದೆ ನೋಡೋಣ, ಬೀಗ ತೆಗೀರ್‍ರೀ!'' ಅಂತ ಆಗೊಮ್ಮೆ ಈಗೊಮ್ಮೆ ಅವನನ್ನ ತಿವೀತಿದ್ದಳು. ಆದರೆ ಕೋದಂಡು ಡೂಯಿಂಗ್ ನಥಿಂಗ್ ಅಂತಲೋ ನಥಿಂಗ್ ಡೂಯಿಂಗ್ ಅಂತಲೋ ಏನಾದರೂ ಅವನ್ನ ತೆಗೆಯೋಲ್ಲ ಅಂತ ಹಟ ಹಿಡಿದಿದ್ದ. ಕಾರಣ ಏನು ಗೊತ್ತೆ? ಅವನಪ್ಪ ಸಾಯೋಕ್ಕೆ ಮುಂಚೆ, ಡ್ರಿಪ್ಸ್ ಬದಲಾಯಿಸೋ ಟೈಮ್‌ನಲ್ಲಿ ಕೋದಂಡೂನ ಕರೆದು: ''ಮಗೂ, ನಿನಗೆ ಜೀವಮಾನ ಪರ್ಯಂತ ಸುಖವಾಗಿ ಇರೋಹಾಗೆ ನಾನು ಆಸ್ತಿ ಬಿಟ್ಟು ಹೋಗ್ತಿದೀನಿ. ಹಾಗಾಗಿ ಆ ಅಲಮೇರಾಗಳನ್ನು ತೆಗೀದೇ ಹಾಗೇ ಇಟ್ಕೋ! ಅವೆಲ್ಲಾ ನನ್ನ ತಾತ ಅಜ್ಜಿ ಕಾಲದ್ದು, ಮಾರಿ ಬೆಲೆ ಕಟ್ಟೋ ಅಂತಹ ಸಾಮಾನುಗಳಲ್ಲ'' ಅಂತ ಹೇಳಿದ್ರಂತೆ.

''ಸರಿ ಅಪ್ಪ, ನೀವು ಹೇಳಿದ ಹಾಗೇ ಆಗಲಿ, ಆದರೆ ಅವಲ್ಲಿ ಏನಿವೆ ಅಂತಾನಾದ್ರೂ ಹೇಳ್ತೀಯಾ?'' ಅಂತ ಕೋದಂಡು ಕೇಳಿದನಂತೆ.

ಆದರೆ ಅವರು ಹೇಳೋದಕ್ಕೆ ಮುಂಚೇನೇ ವಿಕ್ಟೋರಿಯಾದಲ್ಲಿ ಡ್ರಿಪ್ಸ್ ಶಾರ್ಟೇಜ್ ಇದ್ದಿದ್ದರಿಂದ, ಪಾಪ ಪ್ರಾಣ ಹೊರಟೇ ಹೋಯ್ತಂತೆ. ಹೀಗಾಗಿ ಕೋದಂಡು ಮೆಂಟಿಸೆಂಟಲ್ಲೋ; ಸೆಂಟಿಮೆಂಟಲ್ಲೋ ಅದೇನೋ ಹೇಳ್ತೀರಲ್ಲಾ ಆ ಕಾರಣಕ್ಕೆ ಅವನ ಜೀವಮಾನದಲ್ಲಿ ಅ, ಆ, ಇ, ಈ ಗಳನ್ನು ತೆಗದೇ ಇರಲಿಲ್ಲವಂತೆ. ಹೀಗಾಗಿ ಬಜಾರಮ್ಮಂಗೆ ಅವನ ಮೇಲಿನ ಕೋಪ ದಿನೇ ದಿನೇ ಹೆಚ್ಚಾಗ್ತಾ ಇತ್ತು. ಅಷ್ಟೇ ಅಲ್ಲ; ''ಈ'' ಅಲಮೇರಾ ಮೇಲೆ ಒಂದು ಕಪ್ಪೆ ಚಿತ್ರ ಅವರಪ್ಪ ಬರೆಸಿದ್ದರಂತೆ. ಅಲ್ಲ, ಅನಂತ ಪದ್ಮನಾಭ ದೇವಸ್ಥಾನದಲ್ಲಿ ಒಂದು ರೂಮಿನ ಬಾಗಿಲ ಮೇಲೆ ''ನಾಗ''ನ ಚಿತ್ರ ಇರೋದೇನೋ ಒಪ್ಕೊಳ್ಳೋಣ, ಆದರೆ ಎಲ್ಲಾ ಬಿಟ್ಟು ಈ ಮಂಡೂಕದ ಚಿತ್ರಕ್ಕೆ ಏನಾದರೂ ಅರ್ಥವಿದೆಯೆ? ಕೋದಂಡೂ ಆದರೂ ಸುಖವಾಗಿ ಬೆಳೆದವನು ಅಲ್ಲವೆ? ಅವನಿಗೆ ಹುಲಿ ಸಿಂಹಗಳು ಹೇಗೆ ಭಯ ತರುತ್ತಿದ್ದವೋ ಕಪ್ಪೆ, ಮಣ್ಣು ಹುಳಗಳನ್ನು ಕಂಡರೂ ಅಷ್ಟೇ ಭಯ ಇತ್ತು. ಅದಕ್ಕೆ ಅವರಪ್ಪ ಬುದ್ಧಿ ಉಪಯೋಗಿಸಿ ''ಈ'' ಮೇಲೆ ಕಪ್ಪೆ ಚಿತ್ರ ಬರೆಸಿದ್ದರು.

ವರ್ಷಗಳು ಉರುಳುತ್ತಾ ಉರುಳುತ್ತಾ ಬಜಾರಮ್ಮನ ಕಾಟವೂ ಜಾಸ್ತಿಯಾಯಿತು. ''ಬೀಗ ತೆಗೀರಿ, ಬೀಗ ತೆಗೀರಿ'' ಅಂತ ಅವಳದ್ದು ದಿನ ನಿತ್ಯ ಸಹಸ್ರನಾಮ ಜಪ ಆಗೋದು. ಕೋದಂಡೂಗೆ ಎಷ್ಟು ಬೇಜಾರಾಯ್ತು ಅಂದರೆ ಒಂದು ದಿನ ನನ್ನ ಹತ್ತಿರ ಬಂದು ''ಭಾವ, ಈ ಬಜಾರೀನೂ ಆ ಅಲ್ಮೇರಾ ತರಹ ಬಾಯಿಗೆ ಬೀಗ ಹಾಕಿ ಒಂದು ಮೂಲೇಲಿ ಕೂರಿಸೋಣ ಅನ್ನಿಸುತ್ತೆ. ನಾನು ಏನು ಮಾಡಲಿ?'' ಅಂತ ಅತ್ಕೊಂಡ. ನಾನು ಸ್ವಲ್ಪ ಬುದ್ಧಿ ಓಡಿಸಿದೆ. ಎಷ್ಟಾದರೂ ಕೋದಂಡು ಅಕ್ಕ ನನ್ನ ಹೆಂಡತಿ! ಅ, ಆ, ಇ, ಈ ಗಳಲ್ಲಿ ಏನಾದರೂ ವಜ್ರವೈಡೂರ್ಯಗಳಿದ್ದರೆ, ಖಂಡಿತ ಅವರಪ್ಪ ಅವಳಿಗೂ ಏನಾದರೂ ಬಿಟ್ಟೇ ಹೋಗಿರಬೇಕಲ್ಲವೆ? ಅಂತ ಯೋಚಿಸಿ, ''ಕೋದಂಡೂ ಇದೂ ಮೆಂಟಿಸೆಂಟಲ್‌ಗಳ ಕಾಲವಲ್ಲ, ಅವಲ್ಲಿ ಏನಿದೆ ಅಂತ ತೆಗೆದು ನೋಡು, ನಿನ್ನ ಹೆಂಡ್ತೀನೂ ಶಾಂತವಾಗ್ತಾಳೆ'' ಅಂತ ಅಂದೆ! ''ಆಗಲಿ, ಭಾವ, ಆದರೆ 'ಈ' ಮಾತ್ರ ತೆಗೆಯೋಲ್ಲ. ಆ ಕಪ್ಪೆ ಚಿತ್ರ ನೋಡಿದ್ರೆ, ಮೈ ಜುಮ್ ಅನ್ನುತ್ತೆ!'' ಅಂದ.

ಸರಿ, ಒಂದು ದಿವಸ ಬಜಾರಮ್ಮ ದೇವರಿಗೆ ತುಪ್ಪದ ದೀಪ ಹಚ್ಚಿ, ನಮ್ಮನ್ನೆಲ್ಲಾ ಅಲ್ಲಿಗೇ ಕರೆದಳು. ಕೋದಂಡು ''ಅ'', ''ಆ'', ''ಇ''ಗಳನ್ನು ತೆಗೆದ, ಆಹಾ ಎಂತಹಾ ದೃಶ್ಯ ಅಂತೀರಾ? ಚಿನ್ನದ ಬಾರ್ಡರ್ ಸೀರೆಗಳು, ಚಿನ್ನದ ಡಾಬುಗಳು, ಒಡವೆ ಪೆಟ್ಟಿಗೆಗಳು, ಒಂದು ಐವತ್ತು ಶಾಲುಗಳು, ಚಿನ್ನದ ಸರಪಳಿ, ವಾಕಿಂಗ್ ಸ್ಟಿಕ್ಕೂ, ಅಡಿಕೆ ಪೆಟ್ಟಿಗೆ, ತಾಮ್ರದ ಪಾತ್ರೆ, ಕಲಾಪತ್ತಿನ ಪಂಚೆ, ಬ್ರಿಟಿಷರ ಕಾಲದ ಕೈ ಗಡಿಯಾರ, ''ಬ್ರೂಕ್‌ಲಾಕ್ಸ್'' ಬೇಧಿ ಮಾತ್ರೆಗಳು, ಶಲ್ಯಗಳು, ಪೂಜೆ ಐಟಮ್‌ಗಳು, ದೀಪದ ಕಂಬಗಳೂ ಒಂದೇ ಎರಡೇ ಎಲ್ಲಾ ದಬದಬಾ ಅಂತ ಹೊರಗೆ ಬಿದ್ದವು! ನಮ್ಮ ಕಾಲದ ಹಾಗೆ ಆವಾಗ ಸಧ್ಯ ಪ್ಲಾಸ್ಟಿಕ್ ಇರಲಿಲ್ಲ, ಇಲ್ಲದಿದ್ರೆ ಅವುಗಳ ಸಾಮಾನುಗಳು ಎಷ್ಟು ಕಾಣಸ್ತಿದ್ದವೋ! ಮದುವೆ ಆದ ಎಷ್ಟೋ ವರ್ಷಗಳ ನಂತರ, ಅವತ್ತು, ಕೋದಂಡು ಅವನ ಹೆಂಡತಿ ಬಜಾರಮ್ಮನ ಮುಖದ ಮೇಲೆ ಒಂದು ಅಪರೂಪದ ನಗುವನ್ನು ಕಂಡ! ನನ್ನ ಹೆಂಡ್ತೀಗೂ ಅವುಗಳಲ್ಲಿ ಪಾಲು ಸಿಕ್ತು. ನನ್ನ ಮುಖದ ಮೇಲೂ ನಗು ಕಾಣಿಸ್ಕೊಂಡ್ತು! ಆದರೆ, ಓದುಗರೇ ಈ ಸ್ಟೇಜ್‌ನಲ್ಲಿ ''..... ಆಮೇಲೆ ಎಲ್ಲರೂ ಸುಖವಾಗಿ ಬಾಳುತ್ತಿದ್ದರು!'' ಅಂತ ಕಥೆ ಮುಗಿಸ್ತೀನಿ ಅಂತ ಅಂದ್ಕೊಂಡ್ರಾ? ಖಂಡಿತ ಇಲ್ಲ. ಯಾಕೇಂದ್ರೆ ಇನ್ನೂ ಆ 'ಈ' ಅಲ್‌ಮೇರಾ ಲಾಕ್ ಹಾಗೇ ಇತ್ತಲ್ಲ? ಈ ಸಲ ನನ್ನ ಹೆಂಡ್ತಿ ಕಾಟದಿಂದ ಕೋದಂಡು ಮೇಲೆ ಒತ್ತಾಯ ಹಾಕ್ದೆ ''ನಿನ್ನ ಪಕ್ಕ ನಾನು ನಿಂತೇ ಇರ್ತೀನಿ ಕೋದಂಡೂ. ಧೈರ್ಯವಾಗಿ ತೆಗೀ, ಕಪ್ಪೆ ಬಂದ್ರೆ ನಾನು ನೋಡ್ಕೋತೀನಿ'' ಅಂತ ಧೈರ್ಯ ಹೇಳಿದೆ. ಕೈ ಕಾಲು ನಡಗುತ್ತಲೇ ಪಾಪ ಕೋದಂಡು 'ಈ' ಅಲ್‌ಮೇರಾ ಒಂದು ದಿನ ತೆಗದ.

ಈ ಸಲ ದಬ ದಬಾ ಅಂತ ಹೊರ ಬಿದ್ದಿದ್ದು ಚಿನ್ನ ಬೆಳ್ಳಿ ಅಲ್ಲ. ಬರೀ ಕಾಗದ ಪತ್ರಗಳು, ಯಾವ ಯಾವುದೋ ಖಾತೆಗಳು, ಪುಸ್ತಕಗಳು ಇತ್ಯಾದಿ. ಕೋದಂಡು ಒಂದು ಕವರ್ ಒಡೆದು (ಸ್ಯಾಂಪಲ್ ತರಹ) ಅದರಲ್ಲೇನು ಬರೆದಿದೆ ಅಂತ ಓದಿದ. ಅದರಲ್ಲಿ ಅವರಪ್ಪನ ಅಪ್ಪ – ಅಂದರೆ ಕೋದಂಡು ಮತ್ತು ನನ್ನ ಹೆಂಡ್ತಿಯ ತಾತ ಬರೆದಿದ್ದ ಒಂದು ಟಿಪ್ಪಣಿಯನ್ನು ಓದಿದೆ. ''....ಈ ಹಾಳು ಮೈಲಾರಯ್ಯ ನನ್ನ ಹತ್ತಿರ ಐದು ಸಾವಿರ ರೂಪಾಯಿ ಸಾಲಮಾಡಿ ಇಷ್ಟು ವರ್ಷವಾದರೂ ತೀರಿಸಿಲ್ಲ. ಅವನ್ನು ನನ್ನ ಜನ್ಮದಲ್ಲಿ ತೀರಿಸದಿದ್ದರೂ ಸರಿ ನನ್ನ ಮಗನಾದರೂ ಅವನನ್ನು ಹುಡುಕಿ ಬಡ್ಡೀ ಸಮೇತ ಅವನಿಂದ ಹೊಡೆದು ಬಡೆದಾದರೂ ವಾಪಸ್ಸು ಕಿತ್ತುಕೊಳ್ಳಬೇಕು..'' ಅಂತೆಲ್ಲಾ ಬರೆದಿದ್ದರು. ಎಪ್ಪತ್ತು ವರ್ಷಗಳ ಹಿಂದೆ ಐದು ಸಾವಿರ ರೂಪಾಯಿ ಅಂದರೆ, ಈಗ ಅದರ ಮೌಲ್ಯ ಲಕ್ಷ ರೂಪಾಯಿಗೂ ಮೇಲಿರಲ್ಲವೇ?

''ಭಾವ, ಈ ಮೈಲಾರಯ್ಯ ಯಾರಿರಬಹುದು? ಅವರ ಮಕ್ಕಳನ್ನೋ ಮೊಮ್ಮಕ್ಕಳನ್ನೋ ಈಗ ಹುಡುಕಿ ಅವರ ಮೇಲೆ ಕೋರ್ಟ್ ಕೇಸ್ ಹಾಕಬಹುದೆ? ಅಥವಾ ಯಾವುದಾದರೂ ರೌಡಿಗಳಿಗೆ ಸುಪಾರಿ ಹಣ ಕೊಟ್ಟು ಒದ್ದು ಹಣ ಕಿತ್ಕೋಬಹುದು ಅಲ್ಲವೆ?'' ಅಂತ ಕೋದಂಡು ನನ್ನ ಕೇಳಿದ. ನಾನೂನೂ ಕೋದಂಡು ತರಹ ಸ್ವಲ್ಪ born ಪೆದ್ದ ಅಂತ ಅನ್ನಿಸಿಕೊಂಡಿದ್ದರೂ, ಒಂದೊಂದು ಸಲ ಬುದ್ಧಿ ಓಡುಸ್ತಿದ್ದೆ. ''ಹಳೇ ಕಾಲದ ಕಥೆಗಳನ್ನೆಲ್ಲಾ ಮರೆತು ಬಿಡಪ್ಪಾ. ಹೆಂಡ್ತೀನೂ ಈಚೀಚೆಗೆ ನಗ್ತಾ ಇದ್ದಾಳೆ. ನಿನಗೆ ಈಗ ಕಪ್ಪೇ ಭಯಾನೂ ಹೋಯ್ತು. ಇಂತಹ ಸಾಲ ಸೋಲ ಅಂತ ಇನ್ನು ಮೇಲೆ ಯೋಚನೆ ಮಾಡಬೇಡ'' ಅಂತ ಹೇಳಿದೆ.

''ಹ್ಞೂಂ, ಭಾವ'' ಅಂತ ಪಾಪ ಒಪ್ಕೊಂಡ.

''ನಾನು ಬರ್ತೀನಪ್ಪಾ, ಯಾಕೋ ಮೈಗೆ ಅಷ್ಟು ಹುಷಾರಿಲ್ಲ'' ಅಂತ ಅಲ್ಲಿಂದ ಕಂಬಿ ಕಿತ್ತು ಮನೇಗೆ ಬಂದು ''ಬದುಕಿದೆಯಾ ಬಡ ಜೀವವೇ'' ಅಂತ ನಿಟ್ಟುಸಿರು ಬಿಟ್ಟೆ. ಯಾಕೇಂತೀರಾ?

ಆ ''ಹಾಳು'' ಮೈಲಾರಯ್ಯನ ಮೊಮ್ಮಗನೇ ನಾನು! ಈ ವಿಷಯ ಕೋದಂಡೂಗೆ ಇನ್ನೂ ಗೊತ್ತೇ ಇಲ್ಲ!

✵

# ಮುಖ್ಯ ಮಂತ್ರಿಗಳು ಸರ್ಕಾರಿ ಶಾಲೆಗೆ ಬಂದಾಗ.......

**- ಗಣೇಶ ಹೆಗ್ಗಡೆ**

**ಪ್ರತಿ ತಿಂಗಳು ಒಂದು ಶಾಲೆಗೆ ಮಂತ್ರಿಗಳು ಭೇಟಿ ಮಾಡಬೇಕು ಎಂಬ ಕಾರ್ಯಕ್ರಮದಡಿ ಮುಖ್ಯ ಮಂತ್ರಿಗಳೇ ಒಂದು ಶಾಲೆಗೆ ಹೋದಾಗ..**

**ಆ**ಷಾಡ ಮಾಸದ ಒಂದು ಗುರುವಾರ. ಶ್ರೀರಂಗಪುರದ ಸರ್ಕಾರಿ ಪ್ರಾಥಮಿಕ ಶಾಲೆಯ ಹೆಡ್ ಮಾಸ್ಟರ್ ಚಿಕ್ಕಮಾವಯ್ಯನವರು ಅಂದು ತಮ್ಮ ಕರ್ತವ್ಯಕ್ಕೆ ಹಾಜರಾಗದೆ, ಟವನಿನಲ್ಲಿರುವ ಏಕೈಕ ಕ್ಷೌರದಂಗಡಿಯಲ್ಲಿ ಮಧ್ಯಾಹ್ನ ಆನಂದ ತುದಿಲಿತರಾಗಿ ಕುರ್ಚಿಯಲ್ಲಿ ಕುಕ್ಕರಿಸಿದ್ದರು. ಅರ್ಧ ಕ್ಷೌರ ಆಗಿತ್ತು. ಆಗಲೆ..... ಹಾಳು ಮೊಬೈಲು ಫೋನು.... ಟ್ರಿಂಗುಣಿಸಿದ್ದುದು. ಆ ಕಡೆಯಿಂದ ಸ್ಕೂಲ್ ಪೀವನ್ ಪಾಪಯ್ಯನ ತೊದಲುವ ನುಡಿ ಕೇಳಿ, ಮಂಡೆ ಬಿಸಿ ಮಾಡಿಕೊಂಡು, ''ವಸಿ ಗುಡ್ಡದ ಮೇಲೆ ಬಂದು ಮಾತಾಡ್ಲೆ ಪಾಪಿ... ನೆಟ್‌ವರ್ಕ ಪ್ರಾಬ್ಲಮ್ ಅದೆ..... ಕ್ಯಾಚ್ ಆಗುಕ್ಕಿಲ್ಲ ಅಂತಾ ತಿಳಿಯಕ್ಕಿಲ್ಲವೇನ್ಲಾ..'' ಎಂದು ಗದರಿಕೊಂಡರು.

ಪೀವನ್ ಪಾಪಯ್ಯ ಆಜ್ಞೆಯನ್ನು ಶಿರಸಾವಹಿಸಿ, ಶಾಲೆಯ ಹಿಂಭಾಗದಲ್ಲಿರುವ ಗುಡ್ಡವನ್ನೇರಿ ಮತ್ತೊಮ್ಮೆ ವದರಿದಾಗ, ಧಡಕ್ಕನೆ ಎದ್ದು ನಿಂತರು ಹೆ: ಮಾ: ಚಿಕ್ಕ ಮಾವಯ್ಯ.

''ಸರಿಯಾಗಿ ಕೇಳಿಸ್ಕೋಂಡೇನ್ಲಾ? ಚೀಪ್ ಮಿನಿಸ್ಟ್ರ ಏನ್ಲಾ..... ಶಾಲೆ ನೋಡಲು ಬತ್ತಾ ಇರೋದು.... ಏನೆಂದೇ?..... ಕೆಂಪು ಗೂಟದ ಕಾರು ಗುಡ್ಡದ ತಿರುವಿನಲ್ಲಿ ಬತ್ತಾ ಇದೆ ಅಂದ್ಯಾ...... ಈಗ್ಲೆ ಬಂದೆ'' ಎಂದವರೆ, ಕ್ಷೌರದವನು ಹೊದಿಸಿದ್ದ ಬಟ್ಟೆಯಲ್ಲೇ ತರಾತುರಿಯಾಗಿ ಮುಖವರೆಸಿ ಕ್ಷೌರದವನಿಗೆ ಕಾಸೂ ಕೊಡದೆ, ಕುರ್ಚಿಯಿಂದ ಥಂಗನೆ ಹಾರಿ, ಶಾಲೆಯ ಕಡೆ ಬೈಸಿಕಲ್ ತುಳಿಯುತ್ತಾ ದೌಡಾಯಿಸಿದರು.

ಮುಖ್ಯ ಮಂತ್ರಿಗಳ ಕಾರು ಹಾಗೂ ಹೆ: ಮಾ: ಚಿಕ್ಕಮಾವಯ್ಯನವರ ಬೈಸಿಕಲ್ ಹೆಚ್ಚೂ ಕಡಿಮೆ ಏಕಕಾಲಕ್ಕೆ ಶ್ರೀರಂಗಾಪುರದ ಸರ್ಕಾರಿ ಪ್ರಾಥಮಿಕ ಶಾಲೆ ತಲುಪಿದ್ದವು. ಶುಭ್ರ ಬಿಳಿ ಪ್ಯಾಂಟು ಅರ್ಧ ತೋಳಿನ ಬಿಳಿ ಶರ್ಟ್, ಕಾಲಲ್ಲಿ ಕಪ್ಪು ಶೂಸು. ಹಣೆಯಲ್ಲಿ ಬೊಟ್ಟು ಕುಂಕುಮ.... ಇಷ್ಟು ದಿನ ಟಿ.ವಿಯಲ್ಲಷ್ಟೇ ನೋಡಿದ್ದ ವ್ಯಕ್ತಿ.... ಈ ದಿನ ಪರೋಕ್ಷವಾಗಿ ಕಾರಿನಿಂದ ಇಳಿಯುತ್ತಿದ್ದಾರೆ. ಜೊತೆಗೆ ಯಾರೂ ಇಲ್ಲ.

''ಇದೇನಿದು? ದಾರಿತಪ್ಪಿ ಸವಾರಿ ಈ ಕಡೆ ಬಂತೇ...?'' ಜಟಿಲವಾಗುತ್ತಿದ್ದ ಯೋಚನಾ ತರಂಗಗಳನ್ನು ಮೆಟ್ಟಿ, ಮುಖದಲ್ಲಿ ನಮ್ರ ಭಾವ ತುಂಬಿಕೊಂಡು, ''ಅಡ್ಡಬಿದ್ದೆ ಮಹಾಸ್ವಾಮಿಗಳಿಗೆ, ಇಂದು, ಈ ಶಾಲೆ, ಈ ನೆಲ, ತಮ್ಮ ಪಾದ ಧೂಳಿನಿಂದ ಪಾವನವಾಯ್ತು'' ಎಂದರು.



ಹೆ: ಮಾ:ರವರ ಕೊಠಡಿಯೊಂದನ್ನು ಬಿಟ್ಟು ಉಳಿದ ಆರು ಶಾಲಾಕೊಠಡಿಗಳಿಗೆ ಶಾಶ್ವತವಾಗಿ ಬೀಗ ಜಡಿದಿದ್ದನ್ನು ಸೂಕ್ಷ್ಮವಾಗಿ ಗಮನಿಸಿದ ಮು: ಮ:ಗಳು, ''ಇದು ಸರ್ಕಾರಿ ಶಾಲೆ ತಾನೇ ಎಲ್ಲೂ ಬೋರ್ಡ್ ಇಲ್ಲವಲ್ರಿ, ನಾವು ದಾರಿತಪ್ಪಿ ಇಲ್ಲಿ ಬಂದಿಲ್ಲವಷ್ಟೇ'' ಎಂದು ಸಿಟ್ಟಿನಿಂದ ಕೇಳಿದಾಗ, ಹೆ: ಮಾ:ರವರ ವದನಲ್ಲಿ ಸೂತಕದ ಛಾಯೆ ಕಾಣಿಸಿಕೊಂಡಿತು.

''ಛೇ... ಛೇ... ಎಲ್ಲಾದ್ರೂ ಉಂಟೆ..... ಖಾವಂದರು.... ಸರಿಯಾದ ಜಾಗಕ್ಕೇ ಬಂದಿದ್ದೀರಿ....''

''ಮತ್ತೆ ಇಲ್ಲಿ ಹುಡುಗರೇ ಕಾಣಿಸುತ್ತಿಲ್ಲವಲ್ರೀ..... ಕೊಠಡಿಗಳಿಗೆಲ್ಲಾ ಬೀಗ ಜಡಿದಿದಿದೆಯಲ್ರೀ..... ಜತೆಗೆ ಒಬ್ಬ ಉಪಾಧ್ಯಾಯರನೂ ಇಲ್ಲವಲ್ರೀ...... ಏನೀ ಶಾಲೆಯ ಸ್ಟೋಂಗ್ತು?''

''ನೂರಾ ಇಪ್ಪತ್ತು ಮಹಾಸ್ವಾಮಿ, ಈ ಕೊಠಡಿಗಳ ಬೀಗಗಗಳನ್ನು ಈಗ್ಲೇ ತೆಗೆಸುತ್ತೇನೆ. ಪರಾಂಬರಿಸುವಂತಾಗಬೇಕು. ಪ್ರತಿದಿನವೂ ಈ ಕೊಠಡಿಗಳ ತಾರಸಿಯಿಂದ ಮಣ್ಣು, ಇಟ್ಟಿಗೆ ಬೀಳಲು ಶುರುವಾಗಿ, ನಾವು ಈ ಮಳೆಗಾಲದಲ್ಲಿ ಹೆಚ್ಚು ರಿಸ್ಕ್ ತೆಗೆದು ಕೊಳ್ಳುವಂತಿರಲಿಲ್ಲ. ಸಾಲದ್ದಕ್ಕೆ ಗೋಡೆಗಳಲ್ಲಿ ಬೇರೆ ದೊಡ್ಡ ದೊಡ್ಡ ಕ್ರಾಕ್‌ಗಳು ತಾವು ಇನ್ಸ್‌ಪೆಕ್ಷನ್‌ಗೆ ಬರೋ ವಿಷಯ ಮುಂಚೆ ಗೊತ್ತಾಗಿದ್ರೆ ಹೆಲ್ಮೆಟ್ ವ್ಯವಸ್ಥೆ ಮಾಡಿರುತ್ತಿದ್ದೆ..... ಮಹಾಸ್ವಾಮಿ.''

''ಈ ಪರಿಸ್ಥಿತಿ ಯಾವಾಗ್ಲಿಂದ?''

''ಸುಮಾರು ಹತ್ತು ವರ್ಷಗಳಿಂದ.''

''ಈ ಕಟ್ಟಡದ ನಿರ್ವಹಣೆಗೆ ಜಿಲ್ಲಾ ಪಂಚಾಯ್ತಿಗೆ ದೂರು ಕೊಟ್ಟಿಲ್ಲವೇನ್ರಿ?''

''ಪ್ರತಿವರ್ಷಾನೂ ಕೊಡುತ್ತಿದ್ದೇನೆ ಮಹಾಪ್ರಭು. ಅನುಮಾನಗೊಂಡು ಆ ಕಛೇರಿಗೇ ಹೋಗಿ ಖುದ್ದಾಗಿ ಪರಿಶೀಲಿಸಿದಾಗ, ಈ ಶಾಲೆಯ ರಿಪೇರಿ, ಸುಣ್ಣ ಬಣ್ಣ ರಿಕಾರ್ಡುಗಳ ಪ್ರಕಾರ ಪ್ರತಿ ವರ್ಷವೂ ಆಗಿ, ಕಂಟ್ರ್ಯಾಕ್ಟರ್‌ಗೆ ಬಿಲ್ಲು ಪಾವತಿಯಾಗಿರುವ ಬಗ್ಗೆ ದಾಖಲಾತಿಗಳಿವೆ ಸ್ವಾಮಿ.''

''ಹೌ ಸ್ಯಾಡ್ ಐಸೆ!''

''ಈ ಶಾಲೇನೂ ರೆಕಾರ್ಡುಗಳ ಪ್ರಕಾರ ಮಾತ್ರ ನಡೀತಿದೆಯೇನ್ರಿ?''

''ಶಾಂತಂ..... ಪಾಪಂ...... ಬಿಡ್ತು ಅನ್ನಿ ಸಾರ್, ನಾವು ಇನ್ನೂ ಆ ಕೀಳು ಮಟ್ಟಕ್ಕೆ ಹೋಗಿಲ್ಲ. ಒಂದು ಪರ್ಯಾಯ ವ್ಯವಸ್ಥೆ ಮಾಡಿಕೊಂಡು ಗುರುಕುಲ ಪದ್ಧತಿಯಂತೆ ಶಾಲೆ ನಡೆಸುತ್ತಿದ್ದೇವೆ.''


''ಹಾಗಂದ್ರೇನ್ರಿ?''

''ಈ ಶಾಲೆಯ ಅರ್ಧ ಕಿಲೋಮೀಟರ್ ವ್ಯಾಪ್ತಿಯೊಳಗಿರುವ ದೊಡ್ಡ ದೊಡ್ಡ ಮರಗಳನ್ನು ನಾವು ಆರಿಸಿಕೊಂಡಿದ್ದೇವೆ. ಈ ಶಾಲೆಯಲ್ಲಿ ನನ್ನನ್ನೂ ಸೇರಿಸಿ ಒಟ್ಟು ಆರು ಜನ ಶಿಕ್ಷಕರು ಒಬ್ಬೊಬ್ಬರಿಗೆ ಒಂದೊಂದು ಮರ ಹಂಚಿದ್ದೇನೆ. ನನ್ನ ಪಾಲಿಗೆ ಹುಣಸೇ ಮರ

ಬಂದಿದೆ. ಸದ್ಯಕ್ಕೆ ಆ ಮರಗಳೇ ನಮ್ಮ ತರಗತಿಗಳು. ಹೀಗಾಗಿ ಬೋರ್ಡ್ ಹಾಕುವುದಕ್ಕೆ ಕನ್‌ಫ್ಯೂಸ್ ಆಗಿ...''

''ಸಾಕು.. ಸಾಕು.. ದಯವಿಟ್ಟು ನಿಲ್ಲಿಸ್ರೀ..... ವಾಟ್ ಎ ಪಿಟಿ ಐಸೆ! ಬನ್ರೀ ಆ ಜಾಗಕ್ಕೇ ಹೋಗೋಣ.''

ಘನತೆ (ವೆತ್ತ) ಎತ್ತ? ಮುಖ್ಯ ಮಂತ್ರಿಗಳು, ಹೆ: ಮಾ: ಚಿಕ್ಕಮಾವಯ್ಯ ಮತ್ತು ಪೀವನ್ ಪಾಪಯ್ಯ ಒಂದು ದೊಡ್ಡ ಆಲದ ಮರದ ಬಳಿಗೆ ಬಂದಾಗ, ಅಲ್ಲಿ ಶಿಕ್ಷಕ ಶಿವಯ್ಯನವರು



ಒಂಟಿಯಾಗಿ ಮರದ ಕೆಳಗೆ ನಿಂತು, ಆಕಾಶದತ್ತ ಮುಖಮಾಡಿ ಕನ್ನಡ ಪಾಠ ಮಾಡುತ್ತಿದ್ದುದನ್ನು ಕಂಡು ಹೌಹಾರಿ ಹೋದರು ಮು: ಮ:ಗಳು. ಕೆಂಗಣ್ಣು ಮಾಡಿಕೊಂಡು ಹೇ: ಮಾ: ಚಿಕ್ಕಮಾದಯ್ಯನವರ ಕಡೆ ತಿರುಗಿ, ''ಯಾವನ್ರೀ..... ಈ ಮುಠ್ಠಾಳ..... ಯಾರಿಗ್ರೀ ಅವನು ಪಾಠ ಮಾಡ್ತಿರೋದು. ಒಬ್ರೂ ಹೈಕಳೇ ಇಲ್ಲವಲ್ರೀ..... ಅಟೆಂಡೆನ್ಸ್ ರಿಜಿಸ್ಟರ್ ಎಲ್ರೀ'' ಎಂದು ಕಿರುಚಿಕೊಂಡಾಗ ಕೊಂಚವೂ ವಿಚಲಿತರಾಗದೆ ಶಿಕ್ಷಕ ಶಿವಯ್ಯನವರು ಅಟೆಂಡೆನ್ಸ್ ರಿಜಿಸ್ಟರ್ ಕೈಗಿತ್ತರು.

''ಏನ್ರೀ ಇದು ಅನ್ಯಾಯ, ಇಪ್ಪತ್ತು ಜನ ಹುಡುಗರು...... ಏಳು ಜನ ಹುಡುಗಿಯರಿಗೆ ಪ್ರಸೆಂಟ್...... ತೋರಿಸಿದ್ದೀರಲ್ರೀ..... ಇಲ್ಲಿ ಒಂದು ನರಪಿಳ್ಳೆಯೂ ಇಲ್ಲವಲ್ರಿ? ''

''ಖಾವಂದರು ಮನ್ನಿಸಬೇಕು. ಕ್ವಾಪ ಮಾಡ್ಕೋಬಾರ್ದು. ದಯವಿಟ್ಟು ತಲೆ ಎತ್ತಿ ನೋಡಬೇಕು ಎಲ್ಲ ಹೈಕಳೂ ಮರದ ಮೇಲೆ ಕುಂತವೆ ಸೈಲೆಂಟಾಗಿ...... ಪಾಠ ಕೇಳಿಸ್ಕೋತಾ ಅವೆ.....''



ಮು: ಮ:ಗಳು ತಲೆ ಎತ್ತಿ ನೋಡಿ, ಕೊಂಬೆಗಳಲ್ಲಿ ಇಳಿಬಿಟ್ಟಿದ್ದ ಜೋಡಿ ಕಾಲುಗಳನ್ನು ಎಣಿಸಿ, ಎರಡರಿಂದ ಭಾಗಿಸಿದಾಗ ಅಟೆಂಡೆನ್ಸ್ ಟ್ಯಾಲಿ ಆಗಿತ್ತು.

''ಐ ಯಾಮ್ ರಿಯಲಿ ಸಾರಿ ಐಸೆ!''

''ಮಹಾಸ್ವಾಮಿ, ಈ ಮರದ ಕೆಳಗೆ ವಿಪರೀತ ಗೊದ್ದ, ಕೆಂಜುಗ, ಚೇಳು, ಹಾವುಗಳ ಕಾಟ, ನಾವು ಇಲ್ಲೂ ರಿಸ್ಕ್ ತಗೋಳೋ ಹಾಗಿರ್ಲಿಲ್ಲ.''

ಹೆ: ಮಾ:ರವರ ಕಣ್ಸನ್ನೆಯ ಅಣತಿಯಂತೆ ಎಲ್ಲಾ ಮಕ್ಕಳೂ ಸರ ಸರನೆ ಮರದಿಂದ ಇಳಿದು, ಮುಖ್ಯಮಂತ್ರಿಗಳ ಮುಂದೆ ಕೈ ಜೋಡಿಸಿ ನಿಂತವು. ಅವುಗಳ ಹರಿದ ಚೊಣ್ಣ, ಬಾಡಿದ ಮುಖ ಕಂಡು ಮು: ಮ:ಗಳಿಗೆ ನಗರದ ಕಾನ್ವೆಂಟ್ ಶಾಲೆಗಳಲ್ಲಿ ಕಲಿಯುತ್ತಿರುವ ತಮ್ಮ ಮೊಮ್ಮಕ್ಕಳ ನೆನಪಾಯಿತು. ಜೊತೆಗೆ..... ಬಾಲ್ಯದ ತಮ್ಮ ಶಾಲಾದಿನಗಳ ನೆನಪು.

ಮು: ಮ:ಗಳು ಇನ್ನೇನು ಕೆಂಪು ಗೂಟದ ಕಾರು ಹತ್ತುವ ವೇಳೆಯಲ್ಲಿ ಹೆ: ಮಾ:ರವರು ಎಂದಿಲ್ಲದ ಧೈರ್ಯ ತಂದುಕೊಂಡು

''ಸ್ವಾಮಿ ನನ್ನದೊಂದು ಬಿನ್ನಹ'' ಎಂದರು.

''ಹೇಳಿ''

''ತಿಂಗಳಿಗೊಂದು ಶಾಲೆ ವೀಕ್ಷಣೆಯ ತಮ್ಮ ಕಾರ್ಯಕ್ರಮ ನಿಜಕ್ಕೂ ಮೆಚ್ಚುವಂಥಾದ್ದೆ. ಭ್ರಷ್ಟಾಚಾರವೆಂಬ ಗೆದ್ದಲು ಹಿಡಿದಿರುವ ಈ ಶಿಕ್ಷಣ ಇಲಾಖೆಯಲ್ಲಿ ನಮ್ಮಂಥ ಬಡಪಾಯಿ ಶಿಕ್ಷಕರು ಇನ್ನೂ ಜೀವಂತ ಉಳಿದಿರುವುದೇ ಒಂದು ಪುಣ್ಯ! ಪ್ರತಿ ಸರ್ಕಾರಿ ಶಾಲೆಯಲ್ಲಿ ಅಣ್ಣಾವ್ರ ಒಂದು ಫೋಟೊ ಹಾಕಿಸುವ ಘನ ಕಾರ್ಯ ತಮ್ಮಿಂದಾಗಬೇಕು''

''ಅಣ್ಣಾವ್ರು ಅಂದ್ರೆ ಡಾ|| ರಾಜಕುಮಾರ್ ಏನ್ರಿ? ನಾನೂ ಅವರ ಫ್ಯಾನ್ ಕಂಡ್ರೀ.''

''ಖಾವಂದರು ತಪ್ಪಾಗಿ ಅರ್ಥೈಸಿ ಕೊಂಡಂತಿದೆ. ಅಣ್ಣಾವ್ರು ಅಂದ್ರೆ ಅವರಲ್ಲಾ..... ಅಣ್ಣಾ ಹಜಾರೆಯವರು!''

ಕೆಂಪು ಗೂಟದ ಕಾರು ಧೂಳೆಬ್ಬಿಸುತ್ತಾ ಗುಡ್ಡದ ತಿರುವಿನಲ್ಲಿ ಕಣ್ಮರೆಯಾಗುತ್ತಿತ್ತು.

''ಸ್ವಾಮಿ ದೇವನೆ ಲೋಕ್ ಪಾಲ್‌ನೆ......'' ಎಂಬ ಹೈಕಳುಗಳ ಪ್ರಾರ್ಥನೆ ಮಾರ್ದನಿಯಾಗಿ ಆ ಕಾರಿನ ಹಿಂದೆ ಅಟ್ಟಿಸಿಕೊಂಡು ಹೋಗುತ್ತಿರುವಂತೆ ಭಾಸವಾಗುತ್ತಿತ್ತು.

✵

---

ತೂಕ ಹೆಚ್ಚಿಸಿಕೊಳ್ಳಲು ಕೆಲವು ನಿರ್ದಿಷ್ಟ ಜಾಗಗಳಿವೆ ಎಂದು ಒಂದು ಅಧ್ಯಯನದಿಂದ ತಿಳಿದು ಬಂದಿದೆ – ಬೇಕರಿ, ಐಸ್ ಕ್ರೀಂ ಪಾರ್ಲರ್, ಪಿಜ್ಜಾ ಅಂಗಡಿ.

# ದಾರೀಲಿ ಹೋಗೋ ಮಾರೀನ

**- ಎಚ್. ಶಾಂತರಾಜ ಐತಾಳ್**

**ಆ**ವತ್ತು ಮಧ್ಯಾಹ್ನ ಊಟ ಮುಗಿಯುವಾಗ ಕರೆಕ್ಟ್ ಎರಡು ಗಂಟೆ. ಊಟ ಮುಗಿಸಿದ ಮೇಲೆ ಉರುಟು ಚಟ್ಟೆ ಡಬ್ಬದಲ್ಲಿ ಬಂದಿಯಾಗಿದ್ದ ಸಿಹಿತಿಂಡಿಯ ನೆನಪಾಯ್ತು. ಹೌದು, ಹೋದವಾರವಷ್ಟೇ ತಯಾರಿಸಿದ ಕಾಯಿಹೋಳಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಅದರ ಮೇಲಿದ್ದ ಬುಗುಟನ್ನು ಪಟಪಟ ಬಡಿದು, ತಿಕ್ಕಿ. ಕ್ಲೀನ್ ಮಾಡಿ ತುಪ್ಪದ ಪಸೆ ಸವರಿ ತಿಂದದ್ದಾಯ್ತು. ಇವೆಲ್ಲ ಕ್ಷೇಮವಾಗಿ ತಲುಪಿದ ಬಗ್ಗೆ ಮೆಸೇಜ್‌ಗಾಗಿ ಕಾಯುತ್ತ ಇನ್ನೇನು ಪವಡಿಸಬೇಕು ಎಂದುಕೊಳ್ಳುತ್ತಿರುವಾಗ ಗೇಟ್‌ನ ಹತ್ತಿರ ಶಬ್ದವಾಯಿತು. 'ಸಾರ್, ನಮಸ್ಕಾರ' ಎನ್ನುತ್ತಾ ಬಿಳಿ ಶರ್ಟು, ಗೀಟು ಗೀಟಿನ ಟೈ, ಕಪ್ಪು ಪ್ಯಾಂಟು ಧರಿಸಿದ ಯುವಕನೊಬ್ಬ ಒಳಗೆ ಬಂದ. ಆತನ ಕೈಯಲ್ಲೊಂದು ಚೀಲ, ಮೆಡಿಕಲ್ ರೆಪ್‌ಗಳ ಹಾಗಿದ್ದು.

ನಾನು 'ನಮಸ್ಕಾರ, ಆದರೆ ನಮ್ಮನೇಲಿ ಡಾಕ್ಟರು ಯಾರೂ ಇಲ್ಲ' ಅಂದೆ.

ಅದಕ್ಕಾತ 'ಹಾಗೇನಿಲ್ಲ. ಓ! ನೀವೂ ನನ್ನನ್ನು ಮೆಡಿಕಲ್‌ರೆಪ್ ಅಂತ ತಿಳಿದ್ರಾ? ಇಲ್ಲ-ಇಲ್ಲ ನಾನು ಮೊಬೈಲ್ ಕಂಪೆನಿಯ ಸರ್ವೀಸ್ ಫೀಲ್ಡ್ ಆಫೀಸರ್' ಎಂದು ಹೇಳುತ್ತಾ ನಕ್ಕ.

''ಓ ಹೌದಾ, ಈಗ ಮೊಬೈಲಿಗೂ ಪರ್ಸನಲ್ ಸರ್ವೀಸ್ ಶುರು ಆಯ್ತಾ? ಒಳ್ಳೇದಾಯ್ತು ಬಿಡಿ. ಏನು ನಿಮ್ಮ ಡ್ಯೂಟಿ ಎಲ್ಲಾ'' ಎಂದು ಕುತೂಹಲ ವ್ಯಕ್ತಪಡಿಸಿದೆ.

''ನೋಡಿ ಸರ್ ಸಿಂಪಲ್. ತನ್ನಿ ನಿಮ್ಮ ಮೊಬೈಲ್ - ನೋಡಿ, ಇದರ ಎಡಗಡೆ ಮೇಲ್ತುದಿಯಲ್ಲಿ ಇದೆಯಲ್ಲಾ ನಾಲ್ಕು ಕಂಬಗಳ ಹಾಗೆ - ಅವು ಎಲರ್ಟ್ ಸಿಗ್ನಲ್‌ಗಳು - ಎಚ್ಚರಿಕೆಯ ಚಿಹ್ನೆಗಳು. ಈಗ ಅವುಗಳ ಬಣ್ಣ ಹಸಿರು, ಹೌದಾ ನೋಡಿ ಈ ಬಟನ್ ಒಂದು, ಎರಡು, ಮೂರು ಸಲ ಒತ್ತಿನೋಡಿ ಅವು ಹಸಿರೇ ಆಗಿದ್ದರೆ ನೋ ಪ್ರಾಬ್ಲಮ್ ಆದರೆ ಸರೀ ನೋಡಿ. ನಿಮ್ಮ ಮೊಬೈಲ್‌ನಲ್ಲಿ ಕೆಂಪು ಬಣ್ಣ ಬಂತು''

'ಹಾಗೆ ಕೆಂಪು ಬಂದ್ರೆ ಮತ್ತೆ ಹಸಿರು ಬರೋವರೆಗೆ ಕಾದರಾಯ್ತು. ಡಯನಾ ಸರ್ಕಲ್‌ನಲ್ಲಿ ಮಾಡಿದ ಹಾಗೆ' ಅಂದೆ ನಾನು - ಸ್ಕೂಟರ್‌ನಲ್ಲಿ ಹೋಗುವಾಗ ಕೆಂಪು ದೀಪ ಬಂದಾಗಲೂ ದಾಟಿ ಹೋಗಿ ಪೋಲಿಸ್ ಮಾಮಾನ ಕೆಂಗಣ್ಣಿಗೆ ಗುರಿಯಾದ್ದನ್ನು ನೆನಪಿಸಿಕೊಳ್ಳುತ್ತಾ.

''ಅಯ್ಯೋ ಹಾಗಲ್ಲ ಸಾರ್, ಹೀಗೆ ಮೊಬೈಲ್‌ನಲ್ಲಿ ಕೆಂಪು ಬಣ್ಣ ಬಂದರೆ ಅದು ರೆಡ್ ಅಲರ್ಟ್ - ನಿಮ್ಮ ಮೊಬೈಲಿಗೆ ವೈರಸ್ ತಾಗಿದೆ ಎಂದರ್ಥ''

''ಏನು ಮೊಬೈಲಿಗೆ ವೈರಸ್ಸಾ?''

''ಹೂಂ ಸಾರ್ ಅದೇ ನಾನು ಹೇಳ್ತಿರೋದು ಜಪಾನ್ ದೇಶದ ರೇಡಿಯೇಶನ್‌ನ ಪರಿಣಾಮ ಇದು. ಏನು ಕೇಳ್ತಿರಾ! ಮೊನ್ನೆ ಕ್ಯಾಲಿಫೋರ್ನಿಯಾದ ಮೆಡಿಕಲ್ ಕೌನ್ಸಿಲ್‌ನಿಂದ ಬಂದ ವರದಿ ಪ್ರಕಾರ ಇಂತಹ ನೂರಾರು ಕೇಸುಗಳು ನ್ಯೂಜಿಲೆಂಡ್ ಮತ್ತು ಅಮೆರಿಕದಿಂದ ಬರ್ತಾ ಇವೆಯಂತೆ. ಹೀಗೆ ರೆಡ್ ಅಲರ್ಟ್ ಬಂದ ಮೊಬೈಲ್‌ನ್ನು ಬಳಸಿದವರಿಗೆ ಮಿದುಳು ಹೆಮರೇಜ್ ಆಗಿ ಈಗಾಗಲೇ ಹದಿನಾರು ಮಂದಿ ಗೋತಾ ಹೊಡೆದಿದ್ದಾರಂತೆ. ಭಾರತದ ಕರಾವಳಿ ತೀರದುದ್ದಕ್ಕೂ ಈ ಮೊಬೈಲ್ ವೈರಸ್ ಹರಡಿದೆಯಂತೆ.''

''ಅಯ್ಯೋ ದೇವ್ರೇ ಈ ಹಾಳಾದ ವೈರಸ್‌ಗಳಿಗೂ ನನ್ನ ಮೊಬೈಲ್ ಬೇಕಾಯ್ತಾ? ಇದರಿಂದ ಹೇಗೆ ಬಚಾವಾಗೋದು ಏನಾದ್ರೂ ನಿಮ್ಮ ಕಂಪನಿಯವರು ಕಂಡುಹಿಡಿದಿದ್ದಾರಾ?'' ಪೆದ್ದನಂತೆ ನಟಿಸದಿರಲು ನಿರ್ಧರಿಸಿ ಕೇಳಿದೆ.

''ಅದಕ್ಕೆ ಸಾರ್ ನಮ್ಮ ಕಂಪನಿ ಇರೋದು. ಈ ಕುರಿತು ತಕ್ಷಣ ರಿಸರ್ಚ್ ನಡೆಸಿ ವೈರಸ್ ಪರಿಹಾರಕ ದ್ರಾವಣವನ್ನು ಫ್ರಾನ್ಸಿನ ಲಿಚಿಟಾ ಲ್ಯಾಬ್‌ನ ಸಹಯೋಗದಿಂದ ಉತ್ಪಾದನೆ ಮಾಡಿಯಾಗಿದೆ. ಇದನ್ನು ಬಳಸಿ ನಿಮ್ಮ ಮೊಬೈಲನ್ನು ಸುಸ್ಥಿತಿಗೆ ತರಲು ಸಾಧ್ಯ. ಆದರೆ ನಿಮ್ಮ ಮೊಬೈಲ್‌ಗೆ ಟ್ರೀಟ್‌ಮೆಂಟ್ ಕೊಟ್ಟಮೇಲೆ ಕನಿಷ್ಠ ಎರಡು ಗಂಟೆ ಕಾಲ ಅದನ್ನು ಉಪಯೋಗಿಸಬಾರದು.'' ಇಷ್ಟನ್ನು ಹೇಳುತ್ತಾ ಮಹಾಶಯ ತನ್ನ ಬ್ಯಾಗ್‌ಜಿಪ್ಪನ್ನು ಪರ್ರಂತ ಎಳೆದು ಹಸಿರು ದ್ರಾವಣ ತುಂಬಿದ ಬಾಟ್ಲಿಯೊಂದನ್ನು ಸರ್ರಂತ ಹೊರತೆಗೆದ. 'ನೋಡಿ ಸರ್ ನೀವು ಒಪ್ಪಿದರೆ ನಿಮ್ಮ ಮೊಬೈಲಿನ ವೈರಸ್ ನಿರ್ಮೂಲನ ಮಾಡುತ್ತೇನೆ. ಒಂದು ಸ್ಟೀಲಿನ ಬೋಗುಣಿ ತನ್ನಿ' ಎಂದ.

'ಆದರೆ ಇದಕ್ಕೆಲ್ಲ ಚಾರ್ಜ್ ಎಷ್ಟಾಗುತ್ತೆ'' ಎಂದು ಕೇಳಿದೆ, ಈ ಸಲ ನನ್ನ ಪೆದ್ದುತನ ಮುಚ್ಚಿಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ.

''ಏನಿಲ್ಲ ಬಿಡಿ ಸಾರ್ ನೀವು ನಮ್ಮ ಸರ್ವೀಸ್ ಸೆಂಟರ್‌ಗೆ ಬಂದರೆ ನಾಲ್ಕು ನೂರಾಗುತ್ತೆ. ಇಲ್ಲಿ ಪರ್ಸನಲ್ ಸರ್ವೀಸ್‌ಗೆ ಮುನ್ನೂರು ಅಷ್ಟೇ'' ಅಂದ.

''ಸರಿ ಅದೇನೋ ಮಾಡಿಯೇ ಬಿಡಿ ಮಾರಾಯ್ರೆ'' ಎನ್ನುತ್ತಾ ನನ್ನ ಮೇಲೆ ಪ್ರಶ್ನಾರ್ಥಕ ಹಾಗೂ ಆಗಂತುಕನ ಮೇಲೆ ಸಂಶಯಾತ್ಮಕ ದೃಷ್ಟಿ ಬೀರುತ್ತಾ ಅಲ್ಲೇ ನಿಂತಿದ್ದ ಅರ್ಧಾಂಗಿಯ ಹತ್ತಿರ ಬೋಗುಣಿ ತರಲು ಹೇಳಿದ್ದೂ ಆಯ್ತು.

''ಅಂತೂ ಜಪಾನಿನ ಸುನಾಮಿ ನಿಮ್ಮಂತಹ ಆಸಾಮಿಗಳಿಗೆಲ್ಲ ಹೊಸ ಹೊಸ ಬಿಸಿನೆಸ್ ಅವಕಾಶ ಮಾಡಿಕೊಟ್ಟಿದೆ ಅಲ್ವಾ ಹೆ, ಹೆ'' ಎಂದು ಹೇಳುತ್ತಾ ನನ್ನ ಜೋಕಿಗೆ ನಾನೇ ನಕ್ಕೆ

''ಸಾರ್ - ನಾನು ಆಚಿನ ರಸ್ತೇಲಿ ಹೋಗೋನು - ಏನೋ ತಪ್ಪಿ ಈಚೆ ಬಂದೆ, ನಿಮ್ಮ ಮೊಬೈಲ್‌ನಲ್ಲಿ 90 ಶೇಕಡಾ ವೈರಸ್ ಪತ್ತೆ ಮಾಡೋದಕ್ಕಾಯ್ತು. ಏನೋ ನಿಮ್ಮ ಪುಣ್ಯ'' ಎನ್ನುತ್ತಾ ನನ್ನ ಮೊಬೈಲನ್ನು ಮಗುಚಿ ನೋಡಿದ.

'ಸರಿ ಮಾಡಿ ಬಿಡಿಯಪ್ಪಾ ಏನು ಚಿಕಿತ್ಸೆನೋ ಅದನ್ನು' ಎನ್ನುತ್ತಾ ಬೋಗುಣಿ ಹಸ್ತಾಂತರಿಸಿದೆ. ಆತ ಸ್ಟೀಲ್ ಬೋಗುಣಿ ಒಳಗೆ ಹಸಿರು ದ್ರಾವಣ ಸುರಿದು ಅದರೊಳಗೆ ನನ್ನ ಮೊಬೈಲ್‌ನ್ನು ಅದ್ದಿ ವಾಚ್ ನೋಡಲಾರಂಭಿಸಿದ. 'ಸರಿ ಇಪ್ಪತ್ತು ಸೆಕೆಂಡಾಯ್ತು. ಸಾಮಾನ್ಯ ವೈರಸ್ ಆದ್ರೆ ಬರೇ ಐದೇ ಸೆಕೆಂಡು ಸಾಕಾಗುತ್ತೆ. ತಗೊಳ್ಳಿ - ಇದನ್ನು ಶುಭ್ರ ಟವಲಿನಲ್ಲಿ ಒರಸಿ

ಹೆಚ್ಚು ಬೆಳಕುಬೀಳದ ಹಾಗೆ ಮೇಜಿನ ಮೇಲಿಡಿ. ಇನ್ನೂ ಎರಡು ಗಂಟೆ ಕಾಲ ಅದಕ್ಕೆ ಕಂಪ್ಲೀಟ್ ರೆಸ್ಟ್ ಆಯ್ತಾ. ವೈರಸ್ ಪೂರ್ತಿಯಾಗಿ ನಾಶವಾಗುತ್ತೆ, ನೋಡಿ' ಎಂದ.

'ಸರಿಯಪ್ಪಾ ಅಂತೂ ಒಂದು ಕುತ್ತಿನಿಂದ ಪಾರಾದ ಹಾಗಾಯ್ತು' – ಎನ್ನುತ್ತಾ ಕಿವಿಗೋ, ಮಿದುಳಿಗೋ ಆಗಬಹುದಾಗಿದ್ದ ಅಪಾಯದಿಂದ ಪಾರುಮಾಡಿದ್ದಕ್ಕಾಗಿ ಅವನ ಶುಲ್ಕ ಕೊಟ್ಟು 'ಥ್ಯಾಂಕ್ಸ್' ಅಂದೆ.

'ನಿಮ್ಮಲ್ಲಿ ಇನ್ನೂ ಯಾರದಾದ್ರೂ ಮೊಬೈಲ್ ಇದ್ರೆ ಕೊಡಿ ಸಾರ್. ಒಮ್ಮೆಲೇ ಎಲ್ಲ ಟೆಸ್ಟ್ ಆಗಿ ಬಿಡಲಿ' ಎಂದು ಆತ ಮತ್ತೆ ಸಲಹೆ ಕೊಟ್ಟು. 'ಇಲ್ಲಪ್ಪಾ ಮಕ್ಕಳ ಹತ್ರ ಇದೆ. ಅವರೆಲ್ಲ ಆಫೀಸಿಗೆ ಹೋಗಿದ್ದಾರೆ' ಎಂದು ನಾನು ಹೇಳುವಾಗ ಟೈವಾಲನ ನಿರ್ಗಮನವಾಗಿತ್ತು.

ಸಂಜೆ ಆರುಗಂಟೆ ಆಯಿತು. ಇನ್ನು ನನ್ನ ಮೊಬೈಲನ್ನು ಪರೀಕ್ಷೆಗೊಡ್ಡಬಹುದು. ಮಗನಿಗೂ, ಸೊಸೆಗೂ ಫೋನ್ ಮಾಡಿ ಈ ಸುದ್ದಿ ತಿಳಿಸಬೇಕು. ಅವರೂ ಸ್ವಲ್ಪ ಎಲರ್ಟ್ ಆಗಲಿ. ಹೇಗೂ ಟೈವಾಲಾನ ಎರಡು ಗಂಟೆ ಮುಗಿಯಿತಲ್ಲಾ – ವೈರಸ್ ಎಲ್ಲ ನಾಶವಾಗಿರಬಹುದು – ಎಂದೆಲ್ಲ ಎಣಿಸಿದೆ. ಮೊದಲಿಗೆ ಅವ ತೋರಿಸಿದ ಕೆಂಪು ಕಂಬಗಳು ಹಸಿರಾಗುವುದನ್ನು ಖಾತ್ರಿ ಮಾಡಿಕೊಳ್ಳೋಣ ಎಂದುಕೊಳ್ಳುತ್ತಾ ಮೊಬೈಲನ್ನು ಮೇಜಿನ ಮೇಲಿಂದ ಎತ್ತಿ ಬಟನ್‌ಗಳನ್ನು ಒತ್ತಲಾರಂಭಿಸಿದೆ. ಊಹೂಂ – ಯಾವ ಬಟನ್ ಎಷ್ಟೇ ಒತ್ತಿದರೂ ಕೆಂಪೂ ಇಲ್ಲ, ಹಸಿರೂ ಇಲ್ಲ, ಕಾಲ್ ಮಾಡೋದಂತೂ ಸಾಧ್ಯವೇ ಇಲ್ಲ. ಅಂದರೆ.... ಹೋಗಿದ್ದು ಮುನ್ನೂರು ಮಾತ್ರವಲ್ಲ; ಮಗ ನಾರಾಯಣ ಮೊನ್ನೆ ದೀಪಾವಳಿಗೆ ಕೊಡಿಸಿದ ನಾಲ್ಕು ಸಾವಿರದ ಮೊಬೈಲಿನ ಮಿದುಳೇ ತಟಸ್ಥವಾಯಿತು, ಬಹುಶಃ– ಎಂದುಕೊಳ್ಳುತ್ತಾ ತಲೆಮೇಲೆ ಕೈ ಇಟ್ಟುಕೊಂಡೆ.

ನನ್ನ ಚಲನವಲನಗಳನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಾ ಬಂದ ಅರ್ಧಾಂಗಿಗಂತೂ ಈ ಬೆಳವಣಿಗೆ ತುಂಬ ಖುಷಿಕೊಟ್ಟಂತೆ ಕಂಡಿತು.

'ಯಾವುದಕ್ಕಾದರೂ ನನ್ನ ಒಂದು ಮಾತು ಕೇಳ್ತಿರಾ? ನೋಡಿ, ಇದೆಲ್ಲ ಬೇಕಿತ್ತಾ? ದಾರಿಲಿ ಹೋಗೋ ಮಾರೀನ ಮನೆಗೆ ಕರೆದು ದುಡ್ಡು ದಂಡ ಮಾಡಿದ್ರಿ ಹೌದಾ. ನಿಮ್ಮದ್ದೆಲ್ಲಾ ಹೀಗೇ – ಕೋಚು ಬಟ್ಟಿನ ವ್ಯಾಪಾರ' ಎಂದು ಗುಣಗಾನ ಮಾಡಲಾರಂಭಿಸಿದಳು.

ನಡುಗುವವನ ಬಳಿ ಸಿಡಿಲು ಹೊಡೆದ ಹಾಗಾಯ್ತು. 'ಹೋಗ್ಲಿ ಬಿಡೇ – ಅಲ್ಲಾ ಮೊಬೈಲ್‌ನ ವೈರಸ್‌ನಿಂದಾಗಿ ನನ್ನ ಮಿದುಳಿಗೆ ಪೆಟ್ಟಾಗಿದ್ರೆ ಏನು ಮಾಡಬೇಕಿತ್ತು ಹೇಳಲ್ಲಾ' ಎಂದೆ ತಡವರಿಸುತ್ತಾ.

'ಅದೂ ನಿಜ ಅನ್ನಿ. ವೈರಸ್ ಇಲ್ಲದೇನೆ ಮಿದುಳಿಗೆ ಪೆಟ್ಟಾದ ಹಾಗೆ ಆಡಿದವರು – ಇನ್ನು ನಿಜವಾಗಿ ವೈರಸ್ಸೇ ಇದ್ದಿದ್ದರೆ! ಅಂತೂ ಮುನ್ನೂರು ರೂಪಾಯಿ ತಗೊಂಡು ಮೂರ್ನಾಮ ಹಾಕಿದ್ನಲ್ಲ ರಾಯರ ಮೋರೆಗೆ' ಎಂದು ಮುಸಿಮುಸಿ ನಕ್ಕಳು. ನನ್ನ ಪೆಚ್ಚು ಮೋರೆ ನೋಡಿ ಅವಳ ಉತ್ಸಾಹ ಇಮ್ಮಡಿಯಾಗಿತ್ತು. ಅಪರೂಪಕ್ಕೆ ಇಂತಹ ಸಂದರ್ಭಗಳು ಬಂದಾಗ ಅವಳಿಗೆ ಟೀವಿಯ ಕಾಂಪ್ಲಾನ್ ಗರ್ಲ್‌ನ ಹಾಗೆ ಅಧಿಕ ಶಕ್ತಿ, ಅಧಿಕ ಹುರುಪು ಬರುವುದನ್ನು



ಗಮನಿಸುತ್ತಾ ಬಂದಿದ್ದೇನೆ. ಅದಕ್ಕೆ ತಿರುಮಂತ್ರ ಪಠಿಸುವ ಧಾಟಿಯಲ್ಲಿ ಹೇಳಿದೆ – ''ನನಗೆ ಇಷ್ಟೆಲ್ಲಾ ಹೇಳ್ತಿಯಲ್ಲಾ ಕಳೆದ ತಿಂಗಳು ಮಾರುತಿ ಗುಡಿ ಹತ್ತಿರ ಪೊಲೀಸ್ ವೇಷ ಹಾಕಿದವ 'ತನ್ನಿಯಮ್ಮಾ, ಚಿನ್ನದ ಸರಾ ಕುತ್ತಿಗೇಲಿ ಬೇಡ, ಪ್ಯಾಕ್ ಮಾಡಿಕೊಡ್ತೇನೆ' ಎಂದು ಹೇಳಿದ ಕೂಡ್ಲೆ ಎರಡೆಳೆ ಸರ ಅವನಿಗೆ ಕೊಟ್ಟು ಆ ಮೇಲೆ ಅವನು ಕೊಟ್ಟ ನೂರು ಗ್ರಾಂ ಸಕ್ಕರೆ ಪೊಟ್ಟಣವನ್ನು ತಂದು ಇಲ್ಲಿ ಬಿಚ್ಚಿ ನೋಡಿ ಕಂಗಾಲ್ ಕಂಪೆನಿಯಾದದ್ದು ಯಾರೂ' ಅಂತ ಕೇಳಿದೆ. ನನ್ನ ಸ್ಪಿನ್ ದಾಳಿ ಎದುರು ಅವಳು ತತ್ತರಿಸಿಯಾಳು ಎಂದುಕೊಂಡಿದ್ದು ಸುಳ್ಳಾಯಿತು. ಪಠಾನ್ ಹೊಡೆದ ಹಾಗೆ ಒಂದು ಛಕ್ಕಾ ಹೊಡೆದೇ ಬಿಟ್ಟಳವಳು. ''ಅಲ್ರೀ, ಒಪ್ಪಿದೆ. ನನಗೆ ಆತ ಅಟ್‌ಲೀಸ್ಟ್ ಸಕ್ಕರೆನಾದ್ರೂ ಕೊಟ್ಟ – ಒಂದು ವಾರ ನಮ್ಮ ಕಾಫಿಗೆ ಅದನ್ನೇ ಹಾಕಿದ್ದೆ – ನೆನೆಪಿಸಿಕೊಳ್ಳಿ. ಆದರೆ ನಿಂಗೆ ಮಾತಿನಲ್ಲೇ ಮಕ್ಮಲ್ ಟೋಪಿ ಹಾಕಿದಾತ ಸಕ್ಕರೆ ಬಿಡಿ ಒಂದಿಷ್ಟು ಉಪ್ಪನ್ನೂ ಕೊಟ್ಟಿಲ್ಲಲ್ರೀ?''

ಹೌದು ಆ ಟೈವಾಲ ಮೊಬೈಲ್ ವೈರಸ್ ನಿವಾರಕ ಸಿಕ್ಕಿದರೆ ಹೇಳಬೇಕು – ''ಟೋಪಿ ಹಾಕುವಾಗ ಕಡೇ ಪಕ್ಷ ಒಂದು ಕೆ.ಜಿ. ಉಪ್ಪನ್ನಾದ್ರೂ ಕೊಡು ಮಾರಾಯಾ. ಆಗ ಒಂದು ತಿಂಗಳ ಮಟ್ಟಿಗಾದ್ರೂ ನಿನ್ನ ಉಪ್ಪಿನ ಋಣ ನಮ್ಮ ಮೇಲೆ ಇರ್ತದೆ'' – ಅಂತ.

---

## ಓದುಗರ ಗಮನಕ್ಕೆ

* ಅಪರಂಜಿ ಚಂದಾ ವಿವರ ಬೇಕೆ?
* ಪತ್ರಿಕೆ ತಲುಪದ ವಿಚಾರ ನಮಗೆ ತಿಳಿಸಬೇಕಿದೆಯೆ?
* ನಮ್ಮ ಪತ್ರಿಕೆಗೆ ಲೇಖನ ಬರೆಯಲಿದ್ದೀರಾ?

ಇಂತಹ ವಿಷಯಗಳ ಬಗ್ಗೆ ಉಪಸಂಪಾದಕರೊಂದಿಗೆ ದೂರವಾಣಿ ಮಾಡಲು ಬಯಸುತ್ತೀರಾ? ಸಂತೋಷ. ಆದರೆ ಬೆಳಗ್ಗೆ 7.00 ರಿಂದ 8.30 ಸಮಯದಲ್ಲಿ ಮಾತ್ರ ಕರೆ ಮಾಡಲು ವಿನಂತಿ. ಉಳಿದ ಸಮಯ ಅವರ ಇತರ ಕೆಲಸಗಳಿಗೆ ಮೀಸಲಾಗಿರುತ್ತದೆ ಎಂಬುದು ನಿಮ್ಮ ನೆನಪಿನಲ್ಲಿರಲಿ.

**ಹಾಗೆಯೇ ಗಮನಿಸಿ:** ನೀವು ದೂರವಾಣಿ ಮಾಡಿದಾಗ ನಿಮ್ಮ ಕರೆಯನ್ನು ಯಾರು ಸ್ವೀಕರಿಸಿದರೂ, ಅವರೊಂದಿಗೆ ನೇರವಾಗಿ ಮಾತಿಗಿಳಿಯದೆ 'ಉಪಸಂಪಾದಕರು ಇದ್ದಾರೆಯೆ?' ಎಂದು ವಿಚಾರಿಸಿ, ಅವರೊಂದಿಗೆ ಮಾತ್ರ ಮಾತನಾಡುವುದು ಸೂಕ್ತ. ಅವರು ಸಿಗದಿದ್ದರೆ ಅವರು ಲಭ್ಯವಿರುವ ಸಮಯ ತಿಳಿದುಕೊಂಡು ನಂತರ ಕರೆ ಮಾಡಬಹುದು.

ಇದಕ್ಕಿಂತಲೂ ಒಂದು ಸರಳ ವಿಧಾನವಿದೆ. ನಿಮಗೆ ಬೇಕಾದ ಮಾಹಿತಿ ಕೋರಿ ಒಂದು ರಿಪ್ಲೈ ಕಾರ್ಡ್ ಬರೆಯಿರಿ. ಲಿಖಿತ ಉತ್ತರ ಸಿಗುತ್ತದೆ. ಅಂದಹಾಗೆ ನಿಮ್ಮ ವಿಳಾಸ, ಚಂದಾ ಸಂಖ್ಯೆ ತಿಳಿಸಲು ಮರೆಯದಿರಿ! ದಯವಿಟ್ಟು ಸಹಕರಿಸಿ.

– ಸಂಪಾದಕರು

## ಏನು ಮಾಡಲಿ..?

**ಗಂಡ**: ಇವತ್ತು ಏನು ಅಡುಗೆ ಮಾಡಲಿ?

**ಹೆಂಡತಿ**: ನೀವು ಹೇಳಿದಂತೆ..

**ಗಂಡ**: ಪಲಾವ್ ಮಾಡಲೆ?

**ಹೆಂಡತಿ**: ಅರೆ! ನಿನ್ನೆ ಅಷ್ಟೇ ತಿಂದೆವಲ್ಲ..

**ಗಂಡ**: ಮತ್ತೆ ರೊಟ್ಟಿ ಪಲ್ಯ ಮಾಡಲೆ?

**ಹೆಂಡತಿ**: ಮಕ್ಕಳು ಬೇಡ ಅಂತಾರೆ

**ಗಂಡ**: ಚೋಲೆ ಪೂರಿ..?

**ಹೆಂಡತಿ**: ತುಂಬಾ ಹೆವಿ ಆಗುತ್ತೇರಿ

**ಗಂಡ**: ಹೌದಾ? ಆಮ್ಲೆಟ್..

**ಹೆಂಡತಿ**: ಛೆ ಛೇ.. ಇವತ್ತು ಗುರುವಾರ ಅಲ್ವಾ..?

**ಗಂಡ**: ಓ, ಮರೆತಿದ್ದೆ. ಮತ್ತೆ ಪರಾಠ?

**ಹೆಂಡತಿ**: ರಾತ್ರಿ ಪರಾಠ ಯಾರು ತಿಂತಾರೆ..?

**ಗಂಡ**: ಹೋಗಲಿ ಹೋಟೆಲ್‌ನಿಂದ ಏನಾದ್ರೂ ತರಿಸೋಣ. ಒಂದು ಚೇಂಜ್ ಆಗುತ್ತೆ.

**ಹೆಂಡತಿ**: ಮತ್ತೆ ಹೋಟೆಲ್‌ನಿಂದ?

**ಗಂಡ**: ಮಜ್ಜಿಗೆ ಹುಳಿ?

**ಹೆಂಡತಿ**: ಮನೇಲಿ ಮೊಸರು ಇಲ್ಲ

**ಗಂಡ**: ಇಡ್ಲಿ ಸಾಂಬಾರ್?


**ಹೆಂಡತಿ**: ಅದು ಲೇಟಾಗುತ್ತೆ.

**ಗಂಡ**: ಮತ್ತೆ ಏನು ಮಾಡಲಿ ಹಾಗಿದ್ದರೆ?

**ಹೆಂಡತಿ**: ನೀವೇ ಹೇಳಿ ಅಂದ್ರೆ..

*- ಹೆಣ್ ಪೆಕಡ್*

## ಭಾರತ ದರ್ಶನ



Mass ಭವಿಷ್ಯ

# ಆಗಸ್ಟ್ 2011

**- ಜ್ಯೋತಿಷಿ ಸತ್ಯೋತ್ತಮಾಚಾರ್ಯ**

**ಮಾಸ ಸೂಕ್ತಿ :** ಜ್ಯೋತಿಷ್ಯವನ್ನು ನಿಂದಿಸುವವರಿದ್ದಾರೆ. ಆದರೆ ಅದನ್ನು ನಂಬಿ ಕೆಟ್ಟವರಿಲ್ಲ. ಜ್ಯೋತಿಷ್ಯದಿಂದಾಗಿ, ನಿಮ್ಮ ಭೂತ ಕಾಲದ ಪಾಪ ಕರ್ಮಗಳನ್ನು ವರ್ತಮಾನ ಕಾಲದಲ್ಲಿ ಅರಿಯುವಿರಿ; ಹಾಗೂ ಭವಿಷ್ಯದಲ್ಲಿ ಆ ಪಾಪ ಕರ್ಮಗಳನ್ನು ಹೇಗೆ ಲಾಭದಾಯಕವಾಗಿ ಮುಂದುವರಿಸಬಹುದೆಂದೂ ತಿಳಿಯುವಿರಿ!

**ಮೇಷ :** ನಿಮ್ಮನ್ನಾಳುವ ಮಂಗಳ ಗ್ರಹದ ಸಂಕೇತ : ಬಿಸಿ ಮತ್ತು ಉಗ್ರತೆ. ಸಿಗರೇಟ್ ಸೇದುವ ಚಟವಿದ್ದರಂತೂ ಅಗ್ನಿಯ ಸ್ವರೂಪವೇ ಆಗುತ್ತೀರಿ! ಸಂಗಾತಿಯೊಡನೆ ಜಗಳ ಖಂಡಿತ; ಮನೆಯಲ್ಲಿ ಪಾತ್ರೆ, ಪೊರಕೆಗಳ ಎಸೆದಾಟ ಕಾದಿದೆ. ಮನೆಯಲ್ಲಿ ಸಾಕು ನಾಯಿ ಇದ್ದರೆ, ಹೊರಗೆ ಬಿಡುವುದು ಒಳಿತು. ಇಲ್ಲದಿದ್ದರೆ ನಿಮ್ಮ ಕೋಪ ಅದರ ಮೇಲೇರುತ್ತೆ. ಅಂಥದರಲ್ಲೂ, ನಿಮ್ಮ ಮನೆಗೆ, ಮದುವೆ ಸಂಬಂಧಕ್ಕೆಂದು ಜನ ಬರಲಿದ್ದಾರೆ. ದೇವರು ಅವರನ್ನು ಕಾಪಾಡಲಿ.

**ವೃಷಭ :** ನಿಮ್ಮ ರಾಶಿ ಗೂಳಿ ರಾಶಿಯಲ್ಲವೇ? ನಿಮ್ಮ ನುಗ್ಗಾಟ, ತಿವಿಯಾಟ ಗೂಳಿಯ ಹಾಗೇ ಇರುತ್ತವೆ. ರಾಜಕಾರಣಿಗಳಾದರೆ ಹಿರಿಯ ಸ್ಥಾನ ಹಾಗೂ ಸಿಂಗಾಪೂರ ಯಾತ್ರೆಗಳು ಕಾದಿವೆ. ಶನಿ ನಿಮ್ಮ ಐದನೇ ಮನೆಯಲ್ಲಿದ್ದು ನಿಮಗೆ ಅಷ್ಟು ತೊಂದರೆಯಾಗದಿದ್ದರೂ ನಿಮ್ಮಿಂದ ಮಿಕ್ಕವರಿಗೆ ಶನಿ ಕಾಟ ಗ್ಯಾರಂಟಿ. ಆರೋಗ್ಯ ತೊಂದರೆಯಿಂದ ಆಸ್ಪತ್ರೆಯ ಭೇಟಿ ಇದೆ. ಆದರೆ ಡಾಕ್ಟರ್, ನರ್ಸಗಳ ಮೇಲೆ ನೀವು ಕೈ ಮಾಡಿ, ಅವರಿಗೇ ಅನಾರೋಗ್ಯ ಪಾಲಿಸುವ ಸಾಧ್ಯತೆ ಇದೆ. ಒಟ್ಟಿನಲ್ಲಿ ನಿಮಗೆ ಸಂತಸದ ತಿಂಗಳು!

**ಮಿಥುನ :** ಈ ತಿಂಗಳು ನಿಮ್ಮಲ್ಲಿ ದ್ವಂದ್ವ ವ್ಯಕ್ತಿತ್ವ ಕಾಣುತ್ತದೆ. ಕರುಣಾಮಯಿ ಕ್ರೂರಮಯಿ ಹೀಗೆ (ಉದಾ: ದೇವಸ್ಥಾನದ ಹೊರಗೆ ಭಿಕ್ಷುಕರಿಗೆ ಕಾಸು ಹಾಕಿ, ಒಳಗೆ ಆರತಿ ತಟ್ಟೆಯಿಂದ ಹತ್ತರಷ್ಟು ಲಪಟಾಯಿಸೋದು.) ಹುಷಾರ್! ಮಕ್ಕಳ ವಿದ್ಯಾಭ್ಯಾಸದ ಮೇಲೆ ವಿಪರೀತ ಖರ್ಚಿದೆ. ಅವರಿಗೆ ನಿಜವಾಗಲೂ ವಿದ್ಯೆ ಬೇಕೆ? ಎಂದು ಯೋಚಿಸಿ. ಈ ತಿಂಗಳು ನಿಮಗೆ ಸುಖ ನಿದ್ರೆಯ ಯೋಗವಿದೆ. ಯುವಕ ಯುವತಿಯರಿಗೆ ರೊಮ್ಯಾಂಟಿಕ್ ನಿದ್ರೆಯಾದರೆ ಹಿರಿಯರಿಗೆ ರ್‍ಹೂಮ್ಯಾಟಿಕ್ ತೊಂದರೆಗಳಿವೆ. ಒಳ್ಳೆಯ ಮುಲಾಮು ಹಚ್ಚಿಕೊಂಡು ನಿದ್ರಿಸಿ.



**ಕಟಕ :** ನಿಮ್ಮ ಚೇಳು ಕುಟಕುವಿನಿಂದ ಎಲ್ಲರಿಗೂ ತೊಂದರೆ ಕೊಡುತ್ತೀರಿ. ಆದರೆ ನೀವು ಪುಣ್ಯವಂತರು; ನಿಮ್ಮ ಆರೋಗ್ಯ ಮಾತ್ರ ಕಲ್ಲು ಗುಂಡಿನ ಹಾಗಿರುತ್ತದೆ. ಸಾಲ ಮಾಡಲು ಉತ್ತಮ ಸಮಯ. ಸ್ಥೂಲ ದೇಹದವರಿಗೆ ಡಯಟ್ ಮಾಡಲು ಇದೊಂದು ಉತ್ತಮ ತಿಂಗಳು. ತಿಂಗಳ ಕೊನೆಗೆ ಐವತ್ತರಿಂದ ನೂರು ಗ್ರಾಮುಗಳಷ್ಟು ನಿಮ್ಮ ತೂಕ ಇಳಿಯುವ ಚಿಹ್ನೆಗಳಿವೆ (ತೂಕದಳತೆ ಊಟಕ್ಕೆ ಮುಂಚೆ ಮಾಡಿದರೆ).

**ಸಿಂಹ :** ಹ್ಯಾಪಿ ಬರ್ತ್‌ಡೇ, ಮದರ್ ಇಂಡಿಯಾ! ಆಗಸ್ಟ್ ಹದಿನೈದು ದೇಶದ ಹುಟ್ಟು ಹಬ್ಬ ದೇಶಕ್ಕೆ ಸುಭಿಕ್ಷ, ಅಚ್ಚುಕಟ್ಟು ಮಳೆ ಬರಲಿದೆ. ಗಂಗೆಯು ಹರಿದು ಬೆಂಗಳೂರಿನ ಅಂಡರ್ ಪಾಸ್‌ಗಳನ್ನೂ, ಮೋರಿಗಳನ್ನೂ, ಮನೆಗಳನ್ನೂ ತುಂಬಿ ಪಾವನ ಮಾಡುತ್ತಾಳೆ. ಪ್ರಾಣಿಗಳನ್ನೂ ಪ್ರಜೆಗಳನ್ನೂ – ಹೀಗೆ ಬೇಡದವರನ್ನೆಲ್ಲಾ ಕೊಚ್ಚೊಯ್ಯುತ್ತಾಳೆ! ಸಿಂಹ ಆಳುವ ಪ್ರತೀಕ. ಹಿರಿಯರ ಅಪ್ಪಣೆ ಪಡೆದು, ನಮ್ಮ ಪ್ರಧಾನಿಯವರು ತಿಂಗಳ ಕೊನೆಯಲ್ಲಿ ಮಾಧ್ಯಮದವರ ಮುಂದೆ ಒಂದೆರೆಡು ಮಾತನಾಡಿ ಒಮ್ಮೆ ನಗುವ ಸೂಚನೆಯೂ ಇದೆ. ಕಾದು ನೋಡಿ! ರಾಹು, ಕೇತು ಪಕ್ಕಕ್ಕೆ ಸರಿದು, ರಾಹುಲ್ ಹಾಗೂ ಮಾತಾ ನಮ್ಮನ್ನು ಕಾಪಾಡುತ್ತಾರೆ.

**ಕನ್ಯಾ :** ನಿಮ್ಮನ್ನಾಳುವ ಶುಕ್ರ ನಿಮಗೆ ಅಭ್ಯುದಯ ಕಾದಿರಿಸಿದ್ದಾನೆ. ನಿಮಗೆ ಹಳದಿ, ಹಸಿರು ಮತ್ತು ಮೆಜೆಂತಾ ಬಣ್ಣಗಳು ಅದೃಷ್ಟತರಲಿವೆ. ಹೆಂಗಸರೇ, ಕಾಂಚಿಪುರಕ್ಕೆ ಹೋಗಿ ಈ ಬಣ್ಣದ ಸೀರೆಗಳನ್ನು ಕೊಂಡು ಬನ್ನಿ. ಶುಕ್ರ – ಸಂಪರ್ಕ ಹಾಗೂ ಉದ್ಯಮಗಳ – ಅಧಿಪತಿ. ಹಾಗಾಗಿ, ಗಂಡಸರು ಮೊಬೈಲ್ ಫೋನ್‌ಗಳನ್ನು ಕಳೆದುಕೊಂಡು, ಹೊಸ ಮಾಡಲ್‌ಗೆ ದುಡ್ಡು ಹಾಕುತ್ತಾರೆ. ಗಂಡಂದಿರು ದೂರ ಪ್ರಯಾಣಕ್ಕೆ ಹೊರಟು, ಮನೆಯಾಕೆಗೆ ಶಾಂತಿ ದೊರಕುತ್ತದೆ.

**ತುಲಾ :** ಬುಧನ ಅನುಗ್ರಹದಿಂದ ಈ ತಿಂಗಳು ನಿಮಗೆ ಎಲ್ಲವೂ ಒಳ್ಳೆಯದಾಗುತ್ತದೆ! ಮನೆ ಕೆಲಸದವಳು, ಹಾಲಿನವನು, ಕೇಬಲ್ ಬಿಲ್, ಟೆಲಿಫೋನ್ ಬಿಲ್, ಕ್ರೆಡಿಟ್ ಕಾರ್ಡ್ ಸ್ಟೇಟ್ ಮೆಂಟ್, ಬ್ಯಾಂಕಿನ ಸಾಲದ ನೋಟಿಸ್ ಇತ್ಯಾದಿಗಳು ಯಾವ ಅಡಚಣೆಗಳೂ ಇಲ್ಲದೆ ನಿಮಗೆ ದಕ್ಕುತ್ತವೆ. ಕಲಾಕಾರರಿಗೆ, ನಟನಟಿಯರಿಗೆ, ಸಂಗೀತಗಾರರಿಗೆ ಬದುಕಿರುವಾಗಲೇ ಪ್ರಶಸ್ತಿಗಳು ಸಿಕ್ಕುವ ಸಾಧ್ಯತೆಗಳಿವೆ. ಲಾಯರ್‌ಗಳಿಗೆ ಹೊಸ ಕಕ್ಷಿಗಳು ಮತ್ತು ಹೊಸದಾದ ಕರಿಯ ಕೋಟು ಸಿಗುವ ಯೋಗವಿದೆ.

**ವೃಶ್ಚಿಕ :** ಮಂಗಳನ ಕೃಪೆಯಿಂದ ನೀವೆಲ್ಲರೂ ದೀರ್ಘಾಯುಸ್ಸನ್ನು ಪಡೆಯುವಿರಿ! ಹಾಗಾಗಿ ಜೀವ ವಿಮಾ ಏಜೆಂಟರು ನಿಮ್ಮೆಡೆಗೆ ಬರುವುದೇ ಇಲ್ಲ! ಆದರೂ ಆರನೇ ಮನೆಯಲ್ಲಿ ಗುರು ನಿಮಗೆ ಕಿರುಕುಳ ಕೊಡಲಿದ್ದಾನೆ. ಚಿಕ್ಕವರಿಗೆ ತಾಯಿಯ ಕಡೆಯಿಂದ ಬೈಗುಳ ಜಾಸ್ತಿಯಾಗುತ್ತದೆ. ಹಾಗೆಯೇ ಗಂಡಸರಿಗೆ ಹೆಂಡತಿಯಿಂದ ಬೈಗುಳವೂ ಇವೆ. ನಿಮಗೆ ಭಾನುವಾರ ಕೆಲಸಕ್ಕೆ ಉತ್ತಮ ದಿನ. ಆದರೆ ಅದು ರಜಾ ದಿನವಾದ್ದರಿಂದ, ಕೆಲಸಕ್ಕೇ ಹೋಗದೇ ಇದ್ದರೆ ಇನ್ನೂ ಉತ್ತಮ.

**ಧನಸ್ಸು :** ಗುರುವಿನ ಅನುಗ್ರಹ ನಿಮಗಿದ್ದರೂ, ನಿಮ್ಮ 12ನೇ ಮತ್ತು 6ನೇ ಮನೆಗಳಲ್ಲಿ ರಾಹು ಮತ್ತು ಕೇತು ಅತಿಥಿಗಳಾಗಿದ್ದಾರೆ. ಹಾಗಾಗಿ ಖರ್ಚು ಜಾಸ್ತಿ. ಅತಿಥಿಗಳು ಮನೆಗೆ ಬಂದರೆ

ನೀರು ಮಜ್ಜಿಗೆ, ನೀರು ಕಾಫಿ, ನೀರು ಪಾನಕ ಕೊಡಿ, ಸಾಕು; ಅದೂ ನಲ್ಲಿಯಲ್ಲಿ ನೀರು ಬಂದರೆ ಮಾತ್ರ. ಆಫೀಸಿನಲ್ಲಿ ಟೂ ಬೈತ್ರೀ, ಒನ್ ಬೈಟೂ ಪದ್ಧತಿಗಳನ್ನೂ ಪಾಲಿಸಿ ದುಡ್ಡು ಉಳಿಸಿ. ಸೋಜಿಗವೆಂದರೆ, ನಿಮಗೆ ದಾನ ಮಾಡುವ ಸುಯೋಗವೂ ಇದೆ. ನಿಮ್ಮ ಕೆಲವು ಹರಿದ ಬಟ್ಟೆಗಳು, ಕರವಸ್ತ್ರಗಳು, ಒಂಟಿ ಚಪ್ಪಲಿಗಳು ಬಡವರ ಕೈ ಸೇರಲಿವೆ. ಸಂತೋಷ.

**ಮಕರ :** ಶನಿ ನಿಮ್ಮ ಅಧಿಪತಿ ಹಾಗೂ ನಿಮ್ಮ ಹಿತಾಸಕ್ತಿ. ಹಾಗಾಗಿ ಮನೆಯಲ್ಲಿ ನಿಮ್ಮ ಮಾತಿಗೆ ಸ್ವಲ್ಪ ಬೆಲೆ ಸಿಗಲಿದೆ. ಏನೇನು ಹೇಳಬೇಕೆಂದಿದ್ದೀರೋ ಈ ತಿಂಗಳಲ್ಲೇ ಎಲ್ಲವನ್ನು ಹೇಳಿ ಮುಗಿಸಿ. ಮದುವೆಯಾಗದವರಿಗೆ ಕಂಕಣದ ಯೋಗವೇನೋ ಇದೆ. ಆದರೆ ಜೀವನದಲ್ಲಿ ಮದುವೆ ಅವಶ್ಯಕವೇ ಎಂದು ಯಾರಾದರೂ ಹಿರಿಯರೊಡನೆ ವಿವೇಚಿಸಿ ನಿರ್ಧರಿಸಿ.

**ಕುಂಭ :** ಶನಿಯು ನಿಮ್ಮನ್ನೂ ಆಳುತ್ತಿದ್ದಾನೆ. ಅವನು ನಿಮಗೆ ತೊಂದರೆ ಕೊಡಲಿದ್ದಾನೆ. ಈ ತಿಂಗಳು ಅನಾವಶ್ಯಕವಾಗಿ ಎಲ್ಲರೊಡನೆ ಜಗಳ ಕೆದಕುತ್ತೀರಿ, ಹಾಗಾಗಿ ಸಿಟಿ ಬಸ್ಸಿನಲ್ಲಿ, ಕ್ಯೂಗಳಲ್ಲಿ, ಮಿಲ್ಕ್‌ಬೂತ್‌ಗಳಲ್ಲಿ ನಿಮಗೆ ಒದೆ ಬೀಳುವ ಚಿಹ್ನೆಗಳಿವೆ. ರಸ್ತೆಯಲ್ಲಿ ನಡೆದು ಹೋಗುವಾಗ ಬೀದಿ ನಾಯಿಗಳಿಗೆ ನಿಮ್ಮಿಂದ ಉದ್ರೇಕವಾಗಿ, ನಿಮ್ಮನ್ನು ಕಚ್ಚಿ ಅವು ತೊಂದರೆಗಳಿಗೆ ಸಿಕ್ಕಿಕೊಳ್ಳುತ್ತವೆ. ಎಷ್ಟೋ ವರುಷಗಳ ಹಿಂದೆ ಸಾಲ ಕೊಟ್ಟವರು ಸುಳಿವಿಲ್ಲದೇ ಪ್ರತ್ಯಕ್ಷರಾಗುತ್ತಾರೆ. ಜೋಕೆ!

**ಮೀನ :** ಪ್ರಿಯ ಮೀನಾರವರೇ, ಈ ತಿಂಗಳು ಗುರು ಬಲದಿಂದ, ತಾತ್ಕಾಲಿಕವಾಗಿ, ಕರುಣಾಮಯಿಯಾಗುತ್ತೀರಿ. ಕಿರಿಯರು ಪರಿಸರವಾದಿಗಳಾಗಿ ಮರ ಗಿಡಗಳಿಗೆ ತಮ್ಮ ಪ್ರೀತಿಯನ್ನು ಎರೆದು ಅಪ್ಪಿಕೊಂಡರೆ, ಹಿರಿಯರು ಹೆಂಡತಿಯನ್ನು, ಮೊಮ್ಮಕ್ಕಳನ್ನು ತಬ್ಬಿಕೊಂಡು ಪ್ರೀತಿ ವಾತ್ಸಲ್ಯ ಹರಡುತ್ತಾರೆ. ನಿಮ್ಮ ರಾಶಿಯವರಿಗೆ ತಾಂತ್ರಿಕತೆ ಮತ್ತು ತಾಂತ್ರಿಕ ಸಲಕರಣೆಗಳು ಸಹಾಯಕ್ಕೆ ಬರುವುದಿಲ್ಲ. ಉದಾಹರಣೆಗೆ, ವೃತ್ತಿಪರವಾಗಿ ಕಂಪ್ಯೂಟರ್ ಮೂಲಕ ಭವಿಷ್ಯ ಹೇಳುವ ಜ್ಯೋತಿಷಿಗಳಿಗೆ ಬಿಸಿನೆಸ್ ಇರೋದಿಲ್ಲ. ಅಂಗಡಿ ಮುಚ್ಚಿದರೆ ಉತ್ತಮ!

ಓದುಗರೇ, ಈಗಷ್ಟೇ ಆಷಾಡ ಮಾಸ ಮುಗಿದಿದೆ. ಹಾಗಾಗಿ ಅತ್ತೆ, ಸೊಸೆಯರು ಒಟ್ಟಿಗೆ ಇದ್ದ ಮನೆಗಳಲ್ಲಿ ಒಳಗೂ ಮುಂಗಾರು ಮಳೆ ತರುವಂತಹ ಗುಡುಗು ಸಿಡಿಲುಗಳು ಆಗಿರಬಹುದು. ಹುಷಾರಾಗಿ ಸಂಸಾರ ನಿಭಾಯಿಸಿದರೆಂದು ಭಾವಿಸೋಣವೆ?

✵

22ನ್ನ ಟ್ವೆಂಟಿಟು, 33ನ್ನ ತರ್ಟಿತ್ರೀ, 44ನ್ನ ಫಾರ್ಟಿಫೋರ್..
ಹೀಗೆ 99ನ್ನ ನೈಂಟಿನೈನ್ ಎಂದು ಕರೆಯುವಾಗ
11ನ್ನ ಒನ್‌ಟಿಒನ್ ಎಂದು ಕರೆಯುವದಿಲ್ಲವೇಕೆ?



# ದೇವರ ಬವಣೆ

– ಆನಂದ

**ದೇ**ವರಿಗೆ ಕೋಪ ಬಂದಂತಿತ್ತು. 'ಈ ಮಂದಿ ನನ್ನೇಕೆ ಎಳೆಯುತ್ತಾರೆ' ಎಂದು ಕೇಳಿದರು. 'ಯಾರು ದೇವಾ?' ಎಂದು ವಿಚಾರಿಸಿದೆ. 'ಅದೇ ಈ ಖದೀಮ ರಾಜಕಾರಣಿಗಳು' ಎಂದು ತಾತ್ಸಾರದಿಂದ ಹೇಳಿದರು.

'ಅವರು ನಿಮ್ಮ ಸೃಷ್ಟಿಯೇ ಅಲ್ಲವೆ?' ಎಂದೆ. 'ಛೆ! ನಾನು ಅವರನ್ನು ಮನುಷ್ಯರನ್ನಾಗಿ ಸೃಷ್ಟಿಸಿದೆ ಅಷ್ಟೆ. ನಂತರ ಅವರಾಗಿಯೇ ರಾಜಕಾರಣಿಗಳಾದರು' ಎಂದ ದೇವರು ಯಾವುದೇ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಸಿದ್ಧರಿರಲಿಲ್ಲ.

'ಸರಿ ಸರಿ. ಈಗ ನಿಮ್ಮ ಚಿಂತೆ ಏನು?' ಎಂದು ಕೇಳಿದೆ. 'ಅದೇ ಈ ಆಣೆ ವ್ಯವಹಾರ. ಅವರ ದೈನಂದಿಕ ವ್ಯವಹಾರಗಳಲ್ಲಿ ನನ್ನೇಕೆ ಭಾಗಿ ಮಾಡಲು ಪ್ರಯತ್ನಿಸಬೇಕು. ನಿಮ್ಮ ಸ್ಥಿತಿಗತಿಯನ್ನು ಸುಧಾರಿಸುತ್ತೇನೆ ಎಂದು ಆಣೆ ಮಾಡಿರುವರೆ ಎಂದಾದರೂ?' ಎಂದು ಕೇಳಿದರು.

'ಆಣೆ ಇಲ್ಲ. ಆದರೆ ಬೇಕಾದಷ್ಟು ಆಶ್ವಾಸನೆಗಳನ್ನು ಕೊಟ್ಟಿರುತ್ತಾರೆ' ಎಂದು ನಿಜವನ್ನೇ ಹೇಳಿದೆ. 'ಆಹಾ! ಅದು ಆಶ್ವಾಸನೆ. ಆಣೆ ಅಲ್ಲ ಅಲ್ಲವೆ?' ಎಂದಾಗ 'ಏನಾದರೂ ವ್ಯತ್ಯಾಸವಿದೆಯೆ?' ಎಂದು ಕೇಳಿದೆ. 'ವ್ಯತ್ಯಾಸ ಇಲ್ಲದಿದ್ದರೆ ಅವರು ದೇವಾಲಯಕ್ಕೇಕೆ ಹೋಗುತ್ತಿದ್ದರು. ಇನ್ನೊಂದು ಆಶ್ವಾಸನೆ ಕೊಡಬಹುದಿತ್ತಲ್ಲವೆ? ಹೀಗೆ ನನ್ನ ಮೇಲೆ ಆಣೆ ಇಡುವ ಬದಲು ಆತ್ಮಸಾಕ್ಷಿಯ ಮೇಲೆ ಆಣೆ ಇಡಬಾರದೇಕೆ ಅವರು?' ಎಂದು ಕೇಳಿದರು.

'ಆತ್ಮಸಾಕ್ಷಿ?! ಆದರೆ ಭಾರತದಲ್ಲಿ ರಾಜಕಾರಣಿ ಆಗಿರಬಹುದು ಅಥವಾ ಆತ್ಮಸಾಕ್ಷಿ ಇರುವ ವ್ಯಕ್ತಿ ಆಗಿರಬಹುದು. ಎರಡೂ ಸಾಧ್ಯವಿಲ್ಲ' ಎಂದು ಪ್ರಾಮಾಣಿಕವಾಗಿಯೇ ಹೇಳಿದೆ. 'ಸರಿ. ಆತ್ಮಸಾಕ್ಷಿ ಇರದು. ಒಪ್ಪೋಣ ಅವರಿಗೆ ಎತ್ತರದ ನಾಯಕರಿಲ್ಲವೇ?' ಎಂದು ಕೇಳಿದಾಗ ನಾನು 'ಎತ್ತರದ ನಾಯಕರು? ಏನು ಹಾಗೆಂದರೆ?' ಎಂದೆ.

'ಅದೇ ಸರ್ವೋಚ್ಚರು, ಪರಮೋಚ್ಚರು.. ಟವರಿಂಗ್ ಪರ್ಸನಾಲಿಟೀಸ್. ಭಾಜಪ ಮಂದಿಗೆ ಶ್ಯಾಮಾ ಪ್ರಸಾದ್ ಮುಖರ್ಜಿ, ವಾಜಪೇಯಿ; ಆರ್‌ಎಸ್‌ಎಸ್ ಮಂದಿಗೆ ಗೋಲ್ವಾಳ್ಕರ್, ಹೆಗ್ಡೆವಾರ್; ಡಿಎಂಕೆಗೆ ಅಣ್ಣಾದೊರೈ, ಎಐಎಡಿಎಂಕೆಗೆ ಅಣ್ಣಾದೊರೈ; ಜೆಡಿ ಮಂದಿಗೆ ಜೆಪಿ; ಶಿವ ಸೇನಾದವರಿಗಾದರಿಗೆ ಠಾಕ್ರೆ: ಬಿಎಸ್‌ಪಿಗೆ ಅಂಬೇಡ್ಕರ್, ಕಾನ್ಷಿರಾಮ್, ಮಾಯಾವತಿ.. ಅವರ ಹೆಸರಿನಲ್ಲಿ ಆಣೆ ಮಾಡಬಹುದಲ್ಲವೆ?'

'ಮತ್ತೆ ಕಾಂಗ್ರೆಸ್‌ಗೆ?' ಎಂದು ವಿಚಾರಿಸಿದಾಗ 'ಗಾಂಧಿ..' ಎಂದರು.

ನಾನು 'ಸೋನಿಯಾ ಅಥವಾ ರಾಹುಲ್?' ಎಂದು ಕೇಳಿದೆ. ಉತ್ತರವಿಲ್ಲ. ದೇವರು ಅದೃಶ್ಯ!

✵

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ಸುಖಕ್ಕೆ ಗಂಡಸು ಬೇಕು; ಸಂಸಾರಕ್ಕೆ ಗಂಡ ಬೇಕು.
- ಅತೃಪ್ತಿಯೇ ನಿಜವಾದ ಬಡತನ.
- ಸಾಯಲು ಸಿದ್ಧವಾಗಿಲ್ಲ ಎಂದ ಮೇಲೆ ಮರು ಹುಟ್ಟು ಹೇಗೆ ಸಾಧ್ಯ?
- An uncertain bee is called maybe.
- ನೀವು ಯುವಕರಂತೆ ಕಾಣಬೇಕೆ? ಹಾಗಿದ್ದರೆ ಬೊಜ್ಜು ಬೆಳೆಸಿರುವ ವಯಸ್ಸಾದವರ ಜತೆ ಕಾಣಿಸಿಕೊಳ್ಳಲು ತೊಡಗಿ.
- ಒಮ್ಮೊಮ್ಮೆ ಕಿವಿ ಹಿಂಡಲೇಬೇಕಾಗಿ ಬರುತ್ತದೆ – ಅದು ಯಾರ ಮೇಲೇ ಇದ್ದಿರಲಿ.
- ಮಲಗುವ ಮುನ್ನ ಸಿಗರೇಟ್ ಸೇದಬೇಡ, ಕುಡಿಬೇಡ, ಟೀವಿ ನೋಡಬೇಡ, ವ್ಯಾಯಾಮ ಮಾಡಬೇಡ ಎಂದೆಲ್ಲಾ ಉಪದೇಶ ಮಾಡುತ್ತಾರೆ. ಆದರೆ ಅವೆಲ್ಲಾ ಮಾಡಲು ಸಮಯ ಇದ್ದಿದ್ದರೆ ಆ ಸಮಯವನ್ನೂ ನಾನು ನಿದ್ದೆ ಮಾಡಲು ಬಳಸುತ್ತಿರಲಿಲ್ಲವೇ?

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- To know and not to act on what you know is equal to not knowing.
- ಪರಿಸ್ಥಿತಿಗೆ ತಕ್ಕಂತೆ ಕೋಪವನ್ನು ಪ್ರದರ್ಶಿಸುವುದು ಬುದ್ಧಿವಂತಿಕೆಯ ಸಂಕೇತ.
- ಒತ್ತಡ ಎಂದರೆ ನೀವು ಏನೋ ಆಗಲು ಬಯಸಿ ಹೊರಟಿರುವುದು; ನೆಮ್ಮದಿ ಎಂದರೆ ನೀವು ನೀವಾಗಿಯೇ ಇರುವುದು.
- ಕೆರೆ ಅಭಿವೃದ್ಧಿಗೆ ಒಂದು ಕೋಟಿ ರೂಪಾಯಿ ಅನುದಾನ ಸುದ್ದಿ. ನೀರಿನಲ್ಲಿ ಹೋಮ ಎನ್ನುವುದು ಇದಕ್ಕೇ ಇರಬೇಕು.
- Eat right, not less.
- ಔಷಧಿಯಲ್ಲಿ ಹಾಸ್ಯ ಇಲ್ಲದಿರಬಹುದು. ಆದರೆ ಹಾಸ್ಯದಲ್ಲಿ ಸಾಕಷ್ಟು ಔಷಧಿ ಇದೆ.
- ಜೀವನದಲ್ಲಿ ಏನೂ ಹೊಳಪು ಕಾಣುತ್ತಿಲ್ಲವೆ? ಹಾಗಿದ್ದರೆ ಡಲ್ ಆಗಿರುವ ಜಾಗಕ್ಕೆ ಒಂದಿಷ್ಟು ಪಾಲಿಶ್ ಹಾಕಿ ನೋಡಿ.
- ರಾಮನ್ ಎಂಬಾತ ಕ್ಯಾಮೆರಾ ಹಿಡಿದರೆ ಅವನನ್ನು ಕ್ಯಾಮರಾಮನ್ ಎಂದು ಕರೆಯಬಹುದೆ?
- The master is a swimming pool where you can learn how to swim. Once you have learned, the entire ocean is yours.
- ನಮ್ಮ ಬಗ್ಗೆ, ನಮ್ಮ ಅಂತಸ್ತಿನ ಬಗ್ಗೆ ಹೆಚ್ಚು ಹೆಮ್ಮೆ ಪಡದಿರುವುದೇ ವಾಸಿ. ಏಕೆಂದರೆ ಚೆಸ್ ಆಡಿದ ಮೇಲೆ ರಾಜ, ರಾಣಿ ಮತ್ತು ಎಲ್ಲರನ್ನೂ ಒಂದೇ ಡಬ್ಬಾದಲ್ಲಿ ಹಾಕಿಡುತ್ತಾರೆ.





# ಹೊರೆಯಲ್ಲದ ನೆರೆ

**- ವಾಣೀ ಸುರೇಶ್**

“ಒಳ್ಳೇ ಚೆನ್ನಾಯ್ತು, ಚಳಿ ಅಂದ ಮಾತ್ರಕ್ಕೆ ಹೀಗೆ ಮನೆಯೊಳಗೇ ಹೊಕ್ಕೊಂಡು ಕೂತ್ಕೊತಾರೆಯೇ? ಎರಡು ದಿನಗಳಿಂದ ಕಾಣಲೇ ಇಲ್ಲವಲ್ಲ ಅಂತ ಅನ್ಕೊತಿದ್ದೆ, ಹುಶಾರಾಗಿದ್ದೀ ತಾನೇ?” – ಎಂದು ಆತ್ಮೀಯವಾಗಿ ಗದರಿಸಿ ಕ್ಷೇಮಸಮಾಚಾರವನ್ನು ವಿಚಾರಿಸಿದ್ದು ಪಕ್ಕದಮನೆಯ ಹ್ಯಾರಲ್ಡ್.

ಎಂಭತ್ತೆಂಟು ವಯಸ್ಸಿನ ವೃದ್ಧ – ತಾನೇ ವಾರಕ್ಕೊಮ್ಮೆಯಾದ್ರೂ ತನ್ನ ಒಂದೂವರೆಕರೆ ಯಾರ್ಡಿನ ಹುಲ್ಲನ್ನು ಕತ್ತರಿಸುವುದಲ್ಲದೆ, ನಮ್ಮನೆಯ ಯಾರ್ಡಿನ ಹುಲ್ಲನ್ನೂ ಕತ್ತರಿಸಿ, ನಮ್ಮ ಅಂಗಳದಲ್ಲಿ ಬಿದ್ದಿಟ್ಟಾಡುವ ಅವರ ಮನೆಯ ಕ್ರಿಸ್ಮಸ್ ಮರದ ಅಸಂಖ್ಯ ಕೋನುಗಳನ್ನೂ, ಇನ್ನುಳಿದ ಒಣ ರೆಂಬೆ–ಕೊಂಬೆ–ಪುರುಲೆಗಳನ್ನೂ ಹೆಕ್ಕಿ ತೆಗೆದು ಒಪ್ಪಗೊಳಿಸಿ, ಚಳಿಗಾಲವಾದರೆ ಅನೇಕ ಬಾರಿ ನಮ್ಮ ಡ್ರೈವ್ ವೇನ ಸ್ನೋವನ್ನೂ ಬ್ಲೋ ಮಾಡುವ, ಹಾಗೂ ಅಪರೂಪಕ್ಕೊಮ್ಮೆ ಮನೆಯೊಳಗೆ ಬಂದು ಕುಳಿತು ಹಾಟ್ ಚಾಕಲೇಟ್ ಹೀರುತ್ತಾ, ಅನೇಕ ಬಾರಿ, ಯಾವ ಎಕ್ಸ್ಟ್ರಾ ಕೆಲಸಕ್ಕೂ ಸಮಯವೇ ಇಲ್ಲದೆ, ಸದಾ ಕಾಲ busyಯಾಗಿರುವಂತೆ ತೋರುವ ನನ್ನ ಮಗ ಸೊಸೆ, ಹಾಗೂ ಈ ಕಾಲದ ಇತರ ಸಾಫ್ಟ್ ವೇರ್ ಉದ್ಯೋಗಿಗಳ ವೇಗದ ಜೀವನ ಶೈಲಿಯ ಯಾಂತ್ರಿಕತೆಯ ಬಗ್ಗೆ ಕೀಟಲೆ ಮಾಡಿ ನಗುವ ವಿಶಿಷ್ಟ ವ್ಯಕ್ತಿಯೇ – ಮಿಸ್ಟರ್ ಆರ್ ಟ್ವೈಲನ್ ಹ್ಯಾರಲ್ಡ್.

ಇನ್ನು ಆಡ್ರೀ, ಗಂಡನಿಗಿಂತಾ ಕೇವಲ ಒಂದು ವರ್ಷದಷ್ಟೇ ಹಿರಿಯಳಾದ, ಹಿಂಜಿದ ಹತ್ತಿಯಂಥಾ ಕೂದಲಿನ, ಅಕ್ಷರಶಃ ಸುಂದರಿ, ಮೊನ್ನೆ ಮೊನ್ನೆ ಹೃದಯಾಘಾತದಿಂದ ಕಣ್ಮರೆಯಾಗುವವರೆಗೂ ಲವಲವಿಕೆಯಿಂದ ಮನೆಯ ಸುತ್ತಲಿನ ತನ್ನ ಚಿಕ್ಕ ಕೈ ದೋಟದ ಬಣ್ಣ ಬಣ್ಣದ ಫ್ಯಾನ್ಸಿ, ಕಾರ್ನೇಶನ್, ಹಯಾಸಿಂತ್ ಹೂ ಗಿಡಗಳ ಆರೈಕೆ ಮಾಡುತ್ತಲೋ, ಮನೆಯೊಳಗಿದ್ದಾಗ ತನ್ನ ಉಗುರುಗಳಿಗೆ ಅಚ್ಚ ಕೆಂಪು ಬಣ್ಣ ತೀಡುತ್ತಲೋ, ಟೀವೀ ನೋಡುತ್ತಲೋ, ಈ ಇಳಿವಯಸ್ಸಿನಲ್ಲೂ ಇಲ್ಲಿಯ ಮಹಿಳೆಯರ ಅತ್ಯಂತ ಆಪ್ತ ಲಕ್ಷಣವಾದ ಲಿಬರೇಟೆಡ್ ಸ್ಪಿರಿಟ್ಟನ್ನು ಧಾರಾಳವಾಗಿ ಹೊರಚೆಲ್ಲುತ್ತಾ ಗಂಡನೊಡನೆ ಯಾವ ಘಳಿಗೆಯಲ್ಲೂ ವಾಗ್ಯುದ್ಧಕ್ಕಿಳಿಯುವಂತೆ ಅನ್ನಿಸುತ್ತಿದ್ದ ಹದಿನಾರಾಣೆ ಅಮೆರಿಕನಿತಿ! ಆದರೂ, ಇಬ್ಬರೂ ಎದುರಾದಾಗ ಸುತ್ತಲಿನವರ ಪರಿವೆಯಿಲ್ಲದೆ ರಿಂ ಲೆಸ್ ಕನ್ನಡಕದೊಳಗಿಂದಲೂ ಇಬ್ಬರ ಮಬ್ಬು ನೀಲಿಕಣ್ಣುಗಳೂ ತುಂಟ ನಗು ಚೆಲ್ಲುತ್ತಿದ್ದ ರೀತಿ ಮಾತ್ರಾ ಅಸದೃಶ! ಹ್ಯಾರಲ್ಡ್–ಆಡ್ರೀ ನನ್ನ ಅನುಭವದಲ್ಲಿ ಈ ದೇಶದಲ್ಲಿ ಇಲ್ಲಿಯವರೆಗೂ ನನಗೆ ಕಾಣಲು ಸಿಕ್ಕಿದ ಅತ್ಯಂತ ಜೀವನಾಸಕ್ತ ಸ್ಫುರದ್ರೂಪಿ ದಂಪತಿ ಎನ್ನಬಹುದು.

ತಲೆ ತುಂಬಾ ಬೆಳ್ಳಿಕೂದಲಿನ ಈ ನಮ್ಮ ಹ್ಯಾರಲ್ಡನ್ನು ಕಂಡರೆ ನವಯುವಕರೂ

ನಾಚಿಗೊಳ್ಳಲೇಬೇಕು. ನಡೆದಾಡುವ ವಿಕಿಪೀಡಿಯಾ ಎನ್ನಬಹುದಾದ ಎರಡನೇ ಮಹಾ ಯುದ್ಧದ ಈ ಮಾಜೀ ಯೋಧ ಹೇಳುವ ಕಥೆಗಳು ಕೂಡಾ ಅಷ್ಟೇ ರೋಚಕ! ಅಕ್ಕಪಕ್ಕದವರ ಅತ್ಯಂತ ಗೌರವಾನ್ವಿತ, ಪ್ರೀತಿಪಾತ್ರ ಅಜ್ಜ, ಫ್ರೆಂಡ್, ಗೈಡ್, ಫಿಲಾಸಫರ್!

ಅವತ್ತು ಸಂಜೆ ಮಗನ ಪ್ರೀತಿಯ ನಾಯಿಮರಿ ಬದ್ರಿಯ ಜೊತೆ ಮನೆ ಹಿಂದಿನ ಯಾರ್ಡ್‌ನಲ್ಲಿ ನಡೆಯುತ್ತಿದ್ದವಳಿಗೆ – ''ನಿನ್ನ ಕೈ ಬೆರಳಿನ ಅರ್ಥ್‌ರೈಟಿಸ್ಗೆ ಕುರ್ತೇಟಿನ ಮದ್ದು ಇಲ್ಲಿದೆ ನೋಡು ವನೀ. ಎಲ್ಲಿ ಬಾಯಿ ತೆಗಿ'' ಎಂದವನು ತಾತನ ಕಾಲದ್ದೊಂದು ಔನ್ಸ್ ಗ್ಲಾಸಿನಲ್ಲಿದ್ದ ಯಾವ್ದೋ ಒಂದು ಕಡುಗೆಂಪು ಹುಳಿಯೊಗರುರಸವನ್ನ ಬಲವಂತ ಮಾಡಿ ಏಕ್ದಂ ನನ್ನ ಬಾಯಿ ತೆಗೆಸಿ ಹನಿಸೇಬಿಟ್ಟ ಈ ಮಹರಾಯ! ಅದೇನೋ ಚೆರ್ರಿ ಹಣ್ಣಿನ ರಸವಂತೆ! 'ವಾಲ್ ಮಾರ್ಟಿನಲ್ಲಿ ಇಂಥಾ ಸೆಕ್ಷನ್ನಿನ ಇಂಥಾ ಬಡು ಮೇಲೆ ಸಿಗತ್ತೆ, ಇವತ್ತೇ ನೀನ್ ಹೋಗಿ ತರ್ಲೇಬೇಕು' ಎನ್ನುವ ಆಗ್ರಹ ಪೂರ್ವಕ ಒತ್ತಾಯ ಬೇರೆ!

ನನಗೋ ಒಂದ್ಕಡೆ ಈ ಬೆಚ್ಚಗಿನ ಆತ್ಮೀಯತೆಯನ್ನು ನೋಡಿ ಕಳೆದುಕೊಂಡಿರುವ ತಂದೆಯ ನೆನಪಾದರೆ, ಇನ್ನೊಂದೆಡೆ ಕಾಣದ ದೇಶದಲ್ಲಿ ಬಂದು ಇದೆಲ್ಲೀ ಗ್ರಹಚಾರಕ್ಕೆ ಸಿಕ್ಕಿಹಾಕ್ಕೊಂಡೆನಪ್ಪಾ – ಖಡಾಖಂಡಿತವಾಗಿ ಬೇಡಾನ್ತಾನೂ ಅನ್ನುಕ್ಕಾಗ್ದೇ ಇರೋ ಈ ಶಿಷ್ಟಾಚಾರದ ಮಧ್ಯೆ ಅಂತ ಯೋಚನೆ. ಮತ್ತೊಂದ್ಕಡೆ, ಈಗ ನಂಗೇನಾದ್ರೂ ಆದ್ರೆ ನನ್ನ ಹೆಲ್ತ್ ಇನ್ಶ್ಯೂರನ್ಸು, ನನ್ನ ಕೇಸನ್ನ ಕವರ್ ಮಾಡಬಹುದೇಂತ ಇನ್ನೂ ದೊಡ್ಡ ಚಿಂತೆ ಬೇರೆ! ಮಗದೊಂದು ಕಡೆ, ತೆಪ್ಪಗಿರಲಾರದೆ ನಾನ್ಯಾಕೆ ನನ್ನ ಬೆರಳು ಮಡಿಚಕ್ಕಾಗ್ದೆ ತೊಂದರೆ ಅನುಭವಿಸಿದ್ದನ್ನು ಹೇಳಿಕೊಳ್ಳುಕ್ಕೆ ಹೋಗಬೇಕಿತ್ತು ಎನ್ನುವ ನನ್ನ ಮೇಲಿನ ಸಿಟ್ಟು, ಒಟ್ನಲ್ಲಿ ಕಲಸು ಮೇಲೋಗರದ ಭಾವನೆಗಳು! ನಂಜುಂಡೇಶ್ವರನ ಒಕ್ಕಲಾದ್ಮೇಲೂ ಅನುಮಾನಾಸ್ಪದವಾದದ್ದನ್ನೇನಾದ್ರೂ ಕುಡಿದದ್ದಕ್ಕೆ ಹೀಗೆಲ್ಲಾ ಯೋಚಿಸ್ತೀನಲ್ಲ ಛೇ ಅಂತನ್ನಿಸಿದ್ರೂ, ಯಾವುದಕ್ಕೂ ಇರ್ಲೀಂತ ಒಂದು ಶಾಲ್ಯಾನ್ನ–ಅಭಿಷೇಕದ ಹರಕೇನಂತೂ ಹೊತ್ಕೊಂಡ್ಬಿಟ್ಟೆ ಸದ್ಯ. ಆಮೇಲೆ ಸ್ವಲ್ಪ ನಿರಾಳ ಆಯ್ತನ್ನಿ.

ಆಮೇಲೆ ಮುಂದಿನ ಒಂದೆರಡು ದಿನ ಅವನ ಕಣ್ಣು ತಪ್ಪಿಸಿಯೇ ಓಡಾಟ ನಂದು, ಇಲ್ಲದಿದ್ರೆ, ಅವನ – ''ಹೇಗಿದ್ದೀಯಾ? ವಾಲ್ಮಾರ್ಟ್ಗೆ ಹೋಗಿದ್ಯಾ? ಚೆರ್ರಿ ಜ್ಯೂಸು ಸಿಕ್ಕಿತಾ? ನೋವು ಹೊರಟೇಹೋಯಿತಲ್ವಾ? ನಾನು ಹೇಳಲಿಲ್ವಾ?'' ಇತ್ಯಾದಿ ಪ್ರಶ್ನೆಗಳ ಸರಮಾಲೇನ್ನ ಎದುರಿಸೋದಾದ್ರೂ ಹೇಗೆ?

ಅಂಥದ್ರಲ್ಲಿ ಮಾರನೇ ದಿನ ಗಪ್ಪಂತ ಹಿಡಿದೇಬಿಟ್ಟ ನೋಡಿ. ''ನಂಗೊತ್ತಿಲ್ವಾ ನಿಮ್ಮ ಈಗಿನ ಕಾಲದವರ ಬುದ್ಧಿ? ನೀನೂನೂ ನನ್ನ ಮಗಳು ಕೇಟೀ ತದ್ವತ್ತು, ಅದೇ ಪ್ರೋಕ್ರಾಸ್ಟಿನೇಷನ್ನು, ಅದೇ ನೆವಗಳು. ನಂಗೊತ್ತು ನೀನು ನನ್ನ ವೈದ್ಯ ಮಾಡಿಲ್ಲ ಅಂತ. ಅನುಭವಿಸು, ನಾನೇನ್ ಮಾಡ್ಲಿ? ಆದ್ರೆ ಮುಖ ತಪ್ಪಿಸಿಕೊಂಡು ಓಡಾಡ್ಬೇಡಾ'' ಅಂತ ಒಂದು ಮಿನಿ ಸರ್ಮನ್ ಬೇರೆ ಜೊತೆಗೆ! ಇನ್ಮೇಲೆ ಏನಾದ್ರೂ ನನ್ನ ಚಿಕ್ಕಾಪುಟ್ಟ ನೋವು, ಇರಿಸುಮುರಿಸುಗಳನ್ನು ಖಂಡಿತಾ ಇವನ ಕೈಲಿ ಹೇಳ್ಕೊಳಲ್ಲ ಅಂತ ಶಪಥ ಮಾಡಿದೇನ್ನಿ... ಪಾಪ ಹೂವಿನಂಥಾ ಮನಸ್ಸನ್ನ ಯಾಕೆ ನೋಯಿಸಬೇಕು? ಅಣ್ಣನ ನೆನಪು ಮತ್ತೆ ಮತ್ತೆ ಕಾಡಿಸಿತು.



''ಹ್ಯಾರಲ್ಡ್, ಇವತ್ತು ಬೆಳಗ್ಗೆ ಒಂದು ವಿಚಿತ್ರ ಪ್ರಾಣಿ ನಮ್ಮ ಯಾರ್ಡಿನಿಂದ ನಿಮ್ಮ ಯಾರ್ಡಿಗೆ ಹೋಗಿದ್ದು ನೋಡಿದೆ. ಈತೀತರ ಇತ್ತು. ಏನಿರಬಹುದೂಂತ ನಿನ್ನ ಅಭಿಪ್ರಾಯ'' ಅಂತ ಕೇಳಿದೇಂತಿಟ್ಕೊಳ್ಳಿ...

ಕರಾರುವಾಕ್ಕಾಗಿ, ''ಹೇ, ಇವತ್ತು ಮಧ್ಯಾಹ್ನ ಒಂದೂವರೇಲಲ್ವಾ? ಯಾಕೇಂದ್ರೆ ಸಿಂಗಪುರ್ ಫ್ಲೈಟು ಹೋದ ತಕ್ಷಣ ಅದು ನಂಗೆ ಕಂಡಿದ್ದು. ನಂಗೇನೋ ಅದು 'ಕಯೋಟೆ' ಇರಬೇಕೂಂತನ್ನಿಸ್ತಪ್ಪಾ. ನನ್ನ ಯಾರ್ಡ್ನು ಅದರದ್ದೇ ಏನೋ ಅನ್ನೋ ಹಾಗೆ, ಒಳ್ಳೇ ಹೇಗೆ ರೋಫಲ್ಲಿ ಓಡಾಡ್ತಿತ್ತು ಗೊತ್ತಾ?'' – ಅಂತನ್ನೋದು ಅವನ ಸ್ಪೆಷಾಲಿಟಿ!

ಅಂದಹಾಗೇ ಹ್ಯಾರಲ್ಡು ಹೆಚ್ಚುಕಡಿಮೆ ಅನೇಕ ಇಂಟರ್‌ನ್ಯಾಷನಲ್ ಫ್ಲೈಟನ್ನೂ ಎಷ್ಟು ಚೆನ್ನಾಗಿ ಗುರುತಿಸ್ತಾನೇಂತ! ಅಷ್ಟೇ ಅಲ್ಲ, ಕೇವಲ ಶಬ್ದ ಮಾತ್ರದಿಂದ ಮೇಲೆ ಹಾರುತ್ತಿರುವ ವಿಮಾನ ಯಾವ ಮೇಕು, ಯಾವ ಮಾಡೆಲ್ಲು ಅನ್ನೋದನ್ನೂ ಕೂಡಾ! ಆಗೆಲ್ಲ ತಾನು ಭಾಗವಹಿಸಿದ ಎರಡನೇ ಮಹಾ ಯುದ್ಧದ ಬಗ್ಗೆ, ತಾನು ಹಾರಿಸಿದ ವಿಮಾನಗಳ ಬಗ್ಗೆ ರಸವತ್ತಾದ ಉಪಕಥೆಗಳ ಸುರಿಮಳೆ ಬೇರೆ ಪುಂಖಾನುಪುಂಖವಾಗಿ! – ನಮಗೆ ಪುರುಸೊತ್ತಿರಬೇಕು ಅಷ್ಟೇ.

ಎಷ್ಟು ಮುಂದುವರಿದ ದೇಶವಾದ್ರೇನು ಆ ತಲೆಮಾರಿನ ಜನರು ಎಲ್ಲಿದ್ರೂ ಒಂದೇನೆ ಅಲ್ವೇ? ನಮ್ಮ ಮಲ್ಲೇಶ್ವರದಲ್ಲಾದ್ರೆ ತಾಳಗುಪ್ಪ ಎಕ್ಸ್‌ಪ್ರೆಸ್ಸು, ಅರಸೀಕೆರೆ ಪ್ಯಾಸೆಂಜರ್ರು, ಕಣ್ಣೂರು ಪ್ಯಾಸೆಂಜರ್ರುಗಳಿಂದಾ ಟೈಮು ಗುರುತಿಸೋದನ್ನ ನೋಡ್ತೀವಿ. ಇಲ್ಲಿ ವಿಮಾನಗಳು! ನಮ್ಮಲ್ಲಿ ಜೀರಿಗೆ–ಮೆಣಸಿನ ಕಷಾಯವಾದರೆ ಇಲ್ಲಿ ಅದರ ಜೊತೆಗೆ 'ಹನಿ ಮತ್ತು ಸಿನ್ನಮನ್' ಟೀ!

ಅಷ್ಟೇ ವ್ಯತ್ಯಾಸ ಅಂತ ನಂಗನ್ನಿಸತ್ತೆ, ನೋಡಿ!

ಲೇಟೆಸ್ಟ್ ಎಂಜಿನಿಯರಿಂಗ್ ಮಾರ್ವೆಲ್ಗಳಿಂದಾ ಹಿಡಿದು ಪಿತ್ತದ ಗಂಧೇಗೆ ಮಾಡಬಹುದಾದ ಮನೇವೈದ್ಯದವರೆಗೂ ಎಲ್ಲದರ ಬಗ್ಗೆ ನಿಖರವಾಗಿ ಮಾಹಿತಿಯಿರುವ ಈ ಮಹಾರಾಯನ್ನ ಏನೂ ಕೇಳಿದರೂ ಹಾಗೇ! ಇನ್ನೊಂದು ದಿನ, ನಮ್ಮನೆ ಫೆನ್ಸ್ ಹತ್ರ ಕಂಡ ಆ ಮುದ್ದಾದ ಅಚ್ಚಕೆಂಪುಹಣ್ಣುಗಳು ಮಾರನೆದಿನ ನೋಡಿದ್ರೆ ಕಪ್ಪಗೆ ಥೇಟ್ ಹಿಪ್ಪನೇರಳೆ ಬಣ್ಣದ ತರಾನೇ ಅನ್ನಿಸಿದ್ದರಿಂದ, ಅದರ ವಿಷಯವಾಗಿ, ನನ್ನ ಮಿತಿಗೆ ತಕ್ಕಂತೆ ಪ್ರಶ್ನಿಸಿದೆ.

''ಓ, ಅದೇ ನಿಮ್ಮ ಯಾರ್ಡಿನ ನೈಋತ್ಯ ಮೂಲೇಲಿರೋ ಪೊದೆ ತಾನೇ? ಹೇ, ಅದನ್ನು ಎಲ್ಲಾದ್ರೂ ತಿಂದುಗಿಂದೀಯಾ! ಕಹಿ ಕಹಿ ಒಗರಾಗಿರತ್ತೆ, ಅದು ಚೋಕ್ ಬೆರೆ'' ಅಂತನ್ನೋದೇ! ಸದ್ಯ, ಮತ್ತೊಂದು ನಿಯರ್ ಎಸ್ಕೇಪು ನನ್ನ ಹೆಲ್ತ್ ಇನ್ಶ್ಯೂರನ್ಸ್ ಕ್ಲೇಯ್ಮ್‌ನಿಂದ ಅಂತನ್ನಿಸ್ತು!

ನಿನ್ನೆ ಸಂಜೆ ಸಿಗಾರ್ ಸೇದ್ತಾ ತನ್ನ ಸಿಟ್ ಔಟ್ನಲ್ಲಿ ತಂಪಾದ ಹವೆಯನ್ನನುಭವಿಸುತ್ತಾ ಪುಸ್ತಕದ ರಾಶಿಯ ಮಧ್ಯೆ ಕೂತಿದ್ದ ಹ್ಯಾರಲ್ಡ್, ಆಚೆ ತಲೆ ಹಾಕಿದ ನನ್ನನ್ನ ನೋಡಿ ''ಹೇ ವನೀ, ಬರ್ತೀಯಾ ಇಲ್ಲಿ ಸ್ವಲ್ಪ, ಒಂದು ನಿಮಿಷ ಟೈಮ್ ಇದ್ರೆ'' ಅಂತ ಕರೆದಾಂತ ಹೋದೆ. ''ಇಷ್ಟೆಲ್ಲಾ ಹರಟೆ ಕೊಚ್ಚೀಯಲ್ಲ, 'ಬಂಗ್' ಅಂದ್ರೇನು ಹೇಳು ನೋಡೋಣಾ?'' ಅಂತ

ಸವಾಲೆಸೆದ. ಮುಂದುವರೆದು ''ಓಕೆ, ಒಂದು ಹಿಂಟ್ ಕೊಡ್ತೀನಿ. ನೋಡು ಇದೇ ಬಂಗ್ ಅಂದ್ರೆ'' – ಅಂತ ತನ್ನ ಕುರ್ಚಿ ಪಕ್ಕದಲ್ಲಿ ಬಿದ್ದಿದ್ದ ಓಬೀರಾಯನ ಕಾಲದ ಪಳೆಯುಳಿಕೆಯಂತಿದ್ದ ಉರುಟಾದ ಒಂದು ವಸ್ತು ವಿಶೇಷವನ್ನು ಎತ್ತಿ ತೋರಿಸಿದ.

ಇದ್ದಕ್ಕಿದ್ದಂತೆ ಬಂದೆರಗಿದ ಪ್ರಶ್ನೆಗೆ ಕಕ್ಕಾಬಿಕ್ಕಿಯಾದವಳನ್ನ – ''ನಿನ್ನ ಹಾಗೇ ಬರೀ ಸಿಹೀ ಹಣ್ಣಿನ ಜ್ಯೂಸುಗಳನ್ನು ಕುಡಿದು ಬೆಳೆದರೆ ಹೀಗೇ ಆಗೋದು. ಬಂಗ್ ಅಂದ್ರೆ ವೈನಿನ ಪೀಪಾಯಿ, ಕೆಗ್‌ಗಳ ತಳದ ರಂಧ್ರದ ಮುಚ್ಚಳ ಗೊತ್ತಾ?'' ಅಂದೋನು ಮಾಮೂಲಿನಂತೆ ತನ್ನ ಮೂವತ್ತೆರಡು (ನ್ಯಾಚುರಲ್) ಹಲ್ಲೂ ತೋರಿಸ್ತಾ – ''ಸರ್ಸರಿ ಹೋಗು ಪಾಪ, ಏನೂ ಕೆಲಸವೋ ಏನೋ ನಿಂಗೆ. ಆಚೆ ಬಂದೋಳನ್ನ ನೋಡಿದೆನಲ್ಲ, ಯಾಕೋ ನಿನ್ನನ್ನ ರೇಗಿಸೋಣಾಂತನ್ನಿಸ್ತು ಅದಕ್ಕೇ ಕರೆದೆ ಅಷ್ಟೇ'' ಅಂತ ಮುಗ್ಧವಾಗಿ ಜೋರಾಗಿ ನಕ್ಕು ಮತ್ತೆ ತನ್ನ ಪುಸ್ತಕದಲ್ಲಿ ತಲೆ ತೂರಿಸಿದ. ನಾನೂ ನಗ್ತಾ ಹಿಂದಿರುಗಿದೇನ್ನಿ.

ಅಂದಹಾಗೇ ಹ್ಯಾರಲ್ಡ್ ಮತ್ತು ಅವನಾಚೆ ಪಕ್ಕದಮನೆಯ ಮತ್ತೊಬ್ಬ ಹಿರಿಯ ಪ್ರಜೆ, ಇವನಿಗಿಂತಾ ಒಂದಿಪ್ಪತ್ತು ವರ್ಷ ಕಿರಿಯನಿರಬಹುದಾದ ಕ್ಯಾಸ್, ಇಬ್ಬರೂ ಗಳಸ್ಯ–ಕಂಠಸ್ಯ ದೋಸ್ತಿಗಳು. ಇವರಿಬ್ಬರ ವಿಚಿತ್ರ, ಆದ್ರೆ ತುಂಬಾ ಇಂಟರೆಸ್ಟಿಂಗ್ ಅನ್ನಿಸುವ ನಂಬಿಕೆಗಳ ಬಗ್ಗೆ ನಿಮಗೆ ಇನ್ನೊಂದ್ಸಲ ಹೇಳ್ತೀನಿ.

ಅಲ್ಲೀವರ್ಗೂ.., ಬಾಯ್.

❋

## ನೈತಿಕ ಪ್ರಶ್ನೆ

ಇಬ್ಬರು ಪಾರ್ಟನರ್ಸ್ ಸೇರಿ ಒಂದು ಅಂಗಡಿ ತೆರೆದರು. ಒಮ್ಮೆ ಒಬ್ಬನೇ ಪಾರ್ಟನರ್ ಕ್ಯಾಶ್ ಕೌಂಟರಿನಲ್ಲಿರುವಾಗ ಒಬ್ಬರು ಸಾಮಾನು ಖರೀದಿ ಮಾಡಿದರು. ಬಿಲ್ ಚುಕ್ತಾ ಮಾಡಿ ಹೋಗುವಾಗ ತುಸು ಗಡಿಬಿಡಿ ಆಯಿತೆಂದು ತೋರುತ್ತದೆ.

ಏಕೆಂದರೆ ಪಾರ್ಟನರ್ ಅವರು ಕೊಟ್ಟ ಹಣ ಎಣಿಸಿಕೊಂಡಾಗ ನೂರು ರೂಪಾಯಿ ಹೆಚ್ಚಿತ್ತು. ಆದರೆ ಗಿರಾಕಿ ಹೊರಟು ಹೋಗಿದ್ದರು. ವಾಪಸ್ ಕೊಡಲು ಸಾಧ್ಯವಾಗುತ್ತಿರಲಿಲ್ಲ. ಈಗ ಪಾರ್ಟನರ್ ಮುಂದೆ ಒಂದು ನೈತಿಕ ಪ್ರಶ್ನೆ ಎದುರಾಯಿತು:

ಅದೇನೆಂದರೆ ಈ ವಿಷಯವನ್ನು ತನ್ನ ಇನ್ನೊಬ್ಬ ಪಾರ್ಟನರ್‌ಗೆ ತಿಳಿಸಬೇಕೆ ಬೇಡವೇ?





# ಬದುಕು ರೂಪಿಸಿದವರು....

- ಗುರು

**ಹೊ**ಸಾ ಕೆಲಸಕ್ಕೆ ಅಂತ ಸೇರಿದ ಮೊದಮೊದರಲ್ಲಿ ಸರ್ವೇ ಸಾಮಾನ್ಯವಾಗಿ ಎಲ್ಲರಲ್ಲೂ ಒಂದು ಭಾವನೆ ಇರುತ್ತೆ – ಮಿಕ್ಕವರಿಗಿಂತಲೂ ತಾನು ಹೆಚ್ಚು ಕೆಲಸ ಮಾಡುತ್ತಿದ್ದೇನೆ ಅಥವಾ ಮೇಲಿನವರು ತನ್ನಿಂದ ಹೆಚ್ಚಿನ ಕೆಲಸವನ್ನು ತೆಗೀತಿದ್ದಾರೆ ಅನ್ನುವ ಭಾವ! ಈ ರೀತಿಯ ಭಾವನೆ ಯಾವ ಕಾರಣಕ್ಕೆ ನಮ್ಮ ಮನಸ್ಸಿನಲ್ಲಿ ಸೇರಿಕೊಳ್ಳುತ್ತೆ ಎಂಬುವ ಯೋಚನೆ ಮೊದಮೊದಲು ತಲೆಯಲ್ಲಿ ಬಂದಿರಲಿಲ್ಲ. ಈಚೆಗೆ ನನಗಿಂತಲೂ ಕಿರಿಯರೊಬ್ಬರು ಅವರು ಕೆಲಸಕ್ಕೆ ಸೇರಿದಾಗಿನ ಹೊಸ ಅನುಭವವನ್ನು ನನ್ನ ಬಳಿ ಹಂಚಿಕೊಂಡರು. ಅವರಿಗೂ ತಾವು ಮಾತ್ರಾ ಹೆಚ್ಚು ಕೆಲಸ ಮಾಡುತ್ತಿರುವುದಾಗಿ ಅನಿಸಿತಂತೆ! ಈ ರೀತಿ ಅನಿಸಲು ಏನು ಕಾರಣವಿರಬಹುದು ಎಂದು ಯೋಚಿಸಿದೆ. ನಮಗಿಂತಲೂ ಮೊದಲು ಕೆಲಸಕ್ಕೆ ಸೇರಿದವರು ಅವರವರ ಕ್ಷೇತ್ರದಲ್ಲಿ ನಮಗಿಂತಲೂ ಹೆಚ್ಚಿನ ಪರಿಣಿತಿಯನ್ನು ಆಗಲೇ ಸಾಧಿಸಿರುತ್ತಾರೆ ಮತ್ತು ಅವರಿಗೆ ನಾವು ಮಾಡುವ ಕೆಲಸವನ್ನೇ ನಿರ್ವಹಿಸಲು ನಮಗಿಂತ ಕಡಿಮೆ ಅವಧಿಯ ಕಾಲ ಸಾಕಾಗುತ್ತದೆ. ಆದರೆ ಹೊಸದಾಗಿ ಬಂದವರಿಗೆ ಪರಿಣಿತಿಗಳಿಸಲು ಕೊಂಚ ಸಮಯ ಬೇಕಾಗುತ್ತದೆ. ಆಗ ಸಹಜವಾಗಿ ತಾನು ಹೆಚ್ಚು ಬೆವರು ಸುರಿಸುತ್ತಿರುವುದಾಗಿಯೂ ತನಗಿಂತ ಹಿರಿಯರು ಅಷ್ಟು ಕಷ್ಟ ಪಡುತ್ತಿಲ್ಲ ಎಂದೂ ಅನಿಸಿಬಿಡುತ್ತದೆ. ಹಿರಿಯರನ್ನು ಕಂಡರೆ ಒಂದು ರೀತಿಯ ಲಘು ಮತ್ತು ಉಢಾಫೆ ಚಿತ್ತ ಮನಸ್ಸನ್ನು ಆವರಿಸಿಬಿಡುತ್ತದೆ. ಸುಮಾರು ಸಲ ಈ ರೀತಿಯ ಮನೋಭಾವವೇ ಒಂದು ರೀತಿಯ ಘರ್ಷಣೆಗೆ ಕಾರಣವಾಗುತ್ತದೆ.

ಸರಿಸುಮಾರು ನನ್ನ ಸಂಗಡ ಕೆಲಸಕ್ಕೆ ಸೇರಿದವರಿಗೆಲ್ಲಾ ಇದೇ ರೀತಿಯ ಮೆಂಟಲ್ ಸೆಟ್ಟಿಂಗು ತಲೆಯಲ್ಲಿತ್ತು. ಯಾವಾಗಲೂ ನಾವು ನಾವೇ ಸೇರಿದರೂ ನಮಗಿಂತ ಮೊದಲು ಕೆಲಸಕ್ಕೆ ಸೇರಿದವರು ಹೇಗೆ ಯಾವ ಕೆಲಸವನ್ನೂ ಮಾಡದೇ (ಇದು ನಮ್ಮ ಅನಿಸಿಕೆ!) ಹಾಯಾಗಿ ಸಂಬಳ ತೆಗೆದುಕೊಂಡು ನಿರ್ಯೋಚನೆಯಿಂದ ಇದ್ದಾರೆ ಎಂದೇ ನಮ್ಮ ಮಾತುಕಥೆಗಳು ಶುರುವಾಗುತ್ತಿತ್ತು! ನಮ್ಮ ಪರಿಚಯದವರ ಪರಿಚಯವಿಲ್ಲದವರ ಹಾಗೂ ಅವರಿವರಿಂದ ಕೇಳಿದ್ದ ಹಲವರ ಹಲವಾರು ಸಂಗತಿಗಳನ್ನು ತಲೆಯಲ್ಲಿ ಇರಿಸಿಕೊಂಡು ನಮ್ಮನ್ನು ಬಿಟ್ಟು ಬೇರೆಯವರೆಲ್ಲರೂ ನಿಷ್ಪ್ರಯೋಜಕರು ಎನ್ನುವ ಹಂತಕ್ಕೂ ನಮ್ಮ ನಮ್ಮಲ್ಲೇ ತಲುಪುತ್ತಿದ್ದೆವು. ಆದರೆ ನಮ್ಮ ಸಂಯಮ(!) ನೋಡಿ, ಈ ವಿಷಯವನ್ನು ತಪ್ಪಿಯೂ ಕೂಡ ಗುಂಪಿನ ಹೊರಗಡೆಯ ಯಾರೆದುರಿಗೂ ಆಡುತ್ತಿರಲಿಲ್ಲ.

ಆದರೆ ನಮ್ಮ ಈ ಗುಂಪಿನಲ್ಲಿ ಅಪರೂಪದ ವ್ಯಕ್ತಿಯೊಬ್ಬರು ಇದ್ದರು. ಅವರಿಗೆ ವಹಿಸಿದ ಕೆಲಸದ ಬಗ್ಗೆ ಒಂದೇ ಒಂದು ಅಪಶೃತಿಯಿಲ್ಲದೇ ಅವರ ಪಾಡಿಗೆ ಅವರು ಕೆಲಸ ಮಾಡಿಕೊಂಡು ಹೋಗುತ್ತಿದ್ದರು. ನಾವುಗಳು ನಮ್ಮ ಕೆಲಸದ ಬಗ್ಗೆ ಒಂದು ರೀತಿಯಲ್ಲಿ

ಕಹಿಯಾದ, ಇನ್‌ಫೀರಿಯರ್ ಭಾವನೆಗಳನ್ನು ಬೆಳೆಸಿಕೊಂಡು ಪ್ರತಿ ನಿಮಿಷ ನಮ್ಮ ಬಾಳು ಹೀಗಾಯಿತೇ ಅಂತ ಯೋಚಿಸಿ ಕೊರಗುತ್ತಿದ್ದರೂ ಇವರು ಮಾತ್ರಾ ತಮ್ಮ ಕೆಲಸವನ್ನು ಸಂಪೂರ್ಣವಾಗಿ ಎಂಜಾಯಿಸುತ್ತಿದ್ದರು. ಇದು ನಮ್ಮ ಗಮನಕ್ಕೂ ಆಗ ಬಂದಿರಲಿಲ್ಲ.

ಕಾಫಿ ಮತ್ತು ಚಹಾ ವಿರಾಮವೆಂದು ಅಧಿಕೃತವಾಗಿ ಹತ್ತು ನಿಮಿಷ ಸಮಯವಿದ್ದರೂ ಇದು ಕೆಲಸದ ಒತ್ತಡ ಹಾಗೂ ಮೇಲ್ವಿಚಾರಕರ ದಕ್ಷತೆಯನ್ನು ಅನುಸರಿಸಿ ಗಂಟೆಗಳ ಕಾಲ ವಿಸ್ತಾರವಾಗುತ್ತಿತ್ತು. ಈ ವಿಸ್ತಾರಹೊಂದಿದ ಸಮಯದಲ್ಲಿ ಸಾಮಾನ್ಯವಾಗಿ ಬೇರೆ ಇಲಾಖೆಗಳಿಗೆ ನಡೆದು ಅಲ್ಲಿನ ಸಹೋದ್ಯೋಗಿಗಳೊಂದಿಗೆ ಹರಟೆ ಕೊಚ್ಚುವುದನ್ನು ರೂಢಿಸಿಕೊಂಡಿದ್ದೆವು. ಒಂದು ಸಲ ಹೀಗೇ ಈ ಗೆಳೆಯರ ಇಲಾಖೆಗೆ ಹೋದೆ. ಮೇಜಿನ ಉದ್ದಕ್ಕೂ ಫೈಲುಗಳನ್ನು ಹರಡಿಕೊಂಡು, ಕೈ ತುಂಬಾ ಕಾಗದಗಳನ್ನಿಟ್ಟುಕೊಂಡು ಇವರು ಏನನ್ನೋ ಹುಡುಕುತ್ತಿದ್ದಾರೆ.

ಕಾಫಿ ಆಯ್ತಾ..... ಅಂದೆ.

ಇಲ್ಲಾ ನಾನು ಕಾಫಿ ಕುಡಿಯೋಲ್ಲವಲ್ಲಾ.... ಅಂದರು.

ಮತ್ತೆ ಕಾಫಿ ಸಮಯ ಹೇಗೆ ಕಳೀತೀರೀ?

ಅಯ್ಯೋ ಸಮಯ ಕಳೆಯೋದಾ? ಬೇಕಾದಷ್ಟು ಕೆಲಸ ಇರುತ್ತಲ್ಲಾ? ಅಂದರು.

ಅಲ್ಲಾ ಇವರೇ ಕಾಫಿ ಟೈಮಿನಲ್ಲೂ ಕೆಲಸ ಮಾಡ್ತೀರಾ? ಅಂತ ಆಶ್ಚರ್ಯದಿಂದ ಕೇಳಿದೆ.

ಕಾಫಿ ಟೀ ಕುಡಿಯೋರಿಗೆ ಮಾತ್ರಾ ಆ ಸಮಯ. ಅದನ್ನು ಕುಡೀದೇ ಇರೋರು ಈ ಸಮಯ ಕಾರ್ಖಾನೆ ಕೆಲಸಕ್ಕೇ ಇಡಬೇಕಲ್ಲವಾ? – ಅಂದರು! ಅವರ ಹುಡುಕಾಟ ಮುಂದುವರೆಯಿತು.

ಒಂದು ವಿನೂತನವಾದ ಯೋಚನಾಧಾಟಿಗೆ ಇವರ ಮಾತು ನನ್ನನ್ನು ತಳ್ಳಿತ್ತು.

ಮುಂದೆ ಇವರು ನಮಗೆ ಒಂದು ತಮಾಷೆ ವಸ್ತುವೂ ಆದರು. ಸರ್ಕಾರೀ ಕಛೇರಿಗಳಲ್ಲಿ ಕಾರಕೂನರು, ಆಫೀಸರುಗಳು ಫೈಲುಗಳನ್ನು ಮನೇಗೆ ತಗೊಂಡು ಹೋಗ್ತಾರಲ್ಲಾ ಹಾಗೆ ಇವರಿಗೆ ಅವಕಾಶ ಸಿಕ್ಕಿದರೆ ಮನೇಗೆ ಫೈಲು ತಗೊಂಡು ಹೋಗುತ್ತಿದ್ದರು. ಇದು ಕಾರ್ಖಾನೆ ಅಲ್ಲವಾ ಪಾಪ ಅವರಿಗೆ ಈ ಅವಕಾಶ ಇಲ್ಲ ಎಂದು ತಮಾಷೆ ಮಾಡುತ್ತಿದ್ದೆವು. ಸುಮಾರು ವರ್ಷ ಹೀಗೆ ಇವರು ನಮ್ಮ ತಮಾಷೆಯ ವಸ್ತುವಾಗಿದ್ದರೂ ಅವರು ಒಂದು ಸಲವೂ ಕೋಪ ಮಾಡಿಕೊಳ್ಳಲೇ ಇಲ್ಲ, ಒಂದು ದಿವಸವೂ ನಮ್ಮ ಮೇಲೆ ರೇಗಲಿಲ್ಲ, ಅದಕ್ಕಿಂತಲೂ ಹೆಚ್ಚಾಗಿ ನಮ್ಮಂಥಹ ಘಟಿಂಗರ, ಕೆಲಸಗೇಡಿಗಳ ಸ್ನೇಹವನ್ನು ಮುಂದುವರಿಸಿಕೊಂಡೇ ಇದ್ದರು. ಮತ್ತು ಆನೆ ದಾರಿ ಆನೆಗೆ ಇಲಿ ದಾರಿ ಇಲೀಗೆ ಎನ್ನುವ ಹಾಗೆ ನಿರ್ಲಿಪ್ತರಾಗಿದ್ದರು. ಯಾವತ್ತಾದರೂ ಒಂದು ದಿವಸ ನೀವು ನಿಮ್ಮನ್ನು ತಿದ್ದುಕ್ಕೊಳ್ತೀರೀ ಅಂತ ಮನಸ್ಸಿನಲ್ಲಿಯೇ ನಗುತ್ತಿದ್ದರೋ ತಿಳಿಯದು! ನಮಗೋ ನಮ್ಮನ್ನು ಕಾಡಲು, ಹಿಂಸಿಸಲು ಹಾಗೂ ನಮ್ಮ ಏಳ್ಗೆಗೆ ಅಡ್ಡ ಬರಲೆಂದೇ ಆಡಳಿತವರ್ಗ ಇದೆ ಅನ್ನುವ ಸಂದೇಹ ಒಳಗೊಳಗೇ ಹೆಮ್ಮರವಾಗಿ ಬೆಳೆದಿತ್ತು.

ಕಾಫಿ, ಚಹಾದ ಬಿಡುವಿನ ವೇಳೆಯಲ್ಲಿ ನಾನು ನನ್ನ ಸ್ವಂತದ ಕೆಲಸಗಳಿಗೆ (ಲಿಟರರಿ



ಕೆಲಸಗಳು, ಬರಹಗಳು, ಸಾಂಸ್ಕೃತಿಕ ಹವ್ಯಾಸಗಳು.... ಹೀಗೆ) ತೊಡಗಿಸಿಕೊಂಡಿದ್ದೆ. ಕಾರ್ಖಾನೆ ವೇಳೆ ಮುಗಿದ ನಂತರ ಒಂದು ನಿಮಿಷವೂ ಒಳಗಡೆ ಇರದೇ ಹೊರಡುತ್ತಿದ್ದೆ. ಸೈರನ್ ಆದಕೂಡಲೇ ಕಾರ್ಖಾನೆಯೊಳಗೆ ಅದೆಂತಹ ತಲೆ ಹೋಗುವ ಕೆಲಸವಿದ್ದರೂ ಹೊರಗೆ ಓಡಿಬಿಡುತ್ತಿದ್ದೆ – ಹೊರಗಡೆ ಬಂದಮೇಲೆ ಅದೇನೋ ಜೈಲಿನಿಂದ ಆಚೆ ಬಂದೆ ಅನಿಸುತ್ತಿತ್ತು. ಉಸಿರು ಕಟ್ಟಿತ್ತು, ಈಗ ಸರಿಹೋಯಿತು ಅನಿಸುತ್ತಿತ್ತು. ನಿರಾಳವಾಗಿ ರಾತ್ರಿ ಸರಿಹೊತ್ತಿನವರೆಗೂ ಕಾರ್ಖಾನೆಗೆ ಸಂಬಂಧವಿರದ ಚಟುವಟಿಕೆಗಳಲ್ಲಿ ನನ್ನನ್ನು ಅಳವಡಿಸಿಕೊಳ್ಳುತ್ತಿದ್ದೆ.

ಈ ಪರಿಸರದಲ್ಲಿ ಬೆಳೆದ ನನ್ನ ಯೋಚನಾ ಧಾಟಿ ಇವರ ಸರಿ ಸಮಕ್ಕೆ ಬರುವುದಕ್ಕೆ ಮೂವತ್ತು ಮೂವತ್ತೈದು ವರ್ಷ ಹಿಡಿಯಿತು. ಅದಾಗಿದ್ದೂ ಒಂದು ವಿಲಕ್ಷಣ ಸಂದರ್ಭದಲ್ಲಿ, ಸುಮಾರು ವರ್ಷ ಇಂತಹ ವಾತಾವರಣ ರೂಢಿಸಿಕೊಂಡಿದ್ದ ನನ್ನನ್ನು ಆಡಳಿತ ವರ್ಗ ಸೂಕ್ಷ್ಮವಾಗಿ ಗಮನಿಸುತ್ತಲೇ ಇತ್ತು ಅಂತ ತೋರುತ್ತೆ. ಒಂದು ದಿವಸ ಕಾರ್ಖಾನೆಯಿಂದ ಹೊರಗೆ ಹೋಗಿದ್ದವನು ಒಳಗಡೆಗೆ ಸಹೋದ್ಯೋಗಿಯೊಬ್ಬರ ಸಂಗಡ ಬರುತ್ತಿದ್ದೇನೆ. ಹಿರಿಯ ಅಧಿಕಾರಿಯೊಬ್ಬರು ಮತ್ತೊಬ್ಬ ಅಧಿಕಾರಿಗಳ ಜತೆ ಬರುತ್ತಿದ್ದರು. ಇಬ್ಬರೂ ಮುಖ್ಯ ದ್ವಾರದಲ್ಲಿಯೇ ಸಿಕ್ಕಿದರು.

ಹೇಗಿದ್ದೀರೀ ಅಂದರು.

ಬಹಳಾ ಚೆನ್ನಾಗಿದ್ದೀನಿ.... ಅಂದೆ.

ಎಲ್ಲಿಂದ ಬರ್ತಾ ಇದೀರೀ... ಅಂತ ಕೇಳಿದರು.

ಆಗ ಅಸೋಸಿಯೇಷನ್ ಒಂದರ ಪ್ರಮುಖ ಹುದ್ದೆಯೊಂದನ್ನು ಹೊಂದಿದ್ದೆ. ಅಂದರೆ ಲೀಡರಾಗಿದ್ದೆ – ಇದನ್ನು ಕುರಿತು ನಂತರ ವಿವರಿಸುತ್ತೇನೆ. (ಈ ವೇಳೇಗೆ ಕೊರಗುವುದನ್ನು ಜೀವಮಾನ ಪೂರ್ತಿ ಇರಿಸಿಕೊಂಡರೆ ಹುಚ್ಚನಾಗ್ತೀನಿ ಅಂತ ಮನಗಂಡಿದ್ದೆ. ಮಾಡುವ ಕೆಲಸವನ್ನು ಅನುಭವಿಸಿ ಸಂತೋಷದಿಂದಲೇ ಮಾಡಿದರೆ ಅದರ ಸುಖವೇ ಬೇರೆ ಅಂತ ಮನದಟ್ಟಾಗಿತ್ತು. ಕೆಲಸಕ್ಕೆ ಸೇರಿದಾಗಿನ ಬಂಡಾಯ ಮನೋಭಾವ ಕಡಿಮೆಯಾಗಿತ್ತು – ಕಡಿಮೆಯೇನು ನಿಂತೇಹೋಗಿತ್ತು! ಉನ್ನತ ಹುದ್ದೆಯಲ್ಲಿದ್ದವರ ಸಂಪರ್ಕದಿಂದ ಮಾತು ಕತೆಗಳು, ರೀತಿ–ನೀತಿ, ನಡಾವಳಿಗಳು ಪಾಲಿಷ್ ಆಗಿದ್ದವು – ಮೊದಲಿನ ಹಾಗೆ ಪ್ರೊಲಿಟೇರಿಯನ್ ಮಾತುಗಳು, ಚರ್ಯೆ ನಿಂತೇಹೋಗಿದ್ದವು.)

ಅಸೋಸಿಯೇಷನ್ ಕೆಲಸ ಇತ್ತು ಅಂದೆ.

ನಿಮ್ಮನ್ನ ಒಂದು ಹೊಸಾ ಜಾಗಕ್ಕೆ ಕರೆದುಕೊಳ್ತಾ ಇದೀವಿ, ತುಂಬಾ ಜವಾಬ್ದಾರಿ ಇರೋ ಜಾಗ, ಫ್ಯಾಕ್ಟರಿ ಸಮಯ ಮುಗಿದಮೇಲೂ ನೀವು ಇರಬೇಕಾಗುತ್ತೆ... ಅಂದರು.

ಎಲ್ಲಿ ಏನು ಕೆಲಸ ಅಂತ ಕೂಡಾ ಕೇಳದೇ ಆಗಲಿ ನೀವು ಮಾಡೋದೆಲ್ಲಾ ನಮ್ಮ ಒಳ್ಳೇದಕ್ಕೇ ತಾನೇ? ಅಂತ ತಲೆಯಾಡಿಸಿಬಿಟ್ಟೆ! ಈ ಮಾತಿನಲ್ಲಿ ಅದೇನು ವ್ಯಂಗ್ಯ ಇತ್ತೋ ಕುಹಕವಿತ್ತೋ ಅದನ್ನು ಹಿರಿಯ ಅಧಿಕಾರಿಗಳು ಪತ್ತೆ ಹಚ್ಚಲಿಲ್ಲ.

ಸರಿ ಗುಡ್. ಬನ್ನಿ ಈಗಲೇ ನನ್ನ ಜತೆಗೆ... ಅಂದರು.

ನನ್ನ ಜತೆ ಬರುತ್ತಿದ್ದ, ಅಸೋಸಿಯೇಷನ್‌ನ ಹಿರಿಯರು ಕಕ್ಕಾಬಿಕ್ಕಿಯಾದರು. ಅವರಿಗೂ ಇಂತಹ ಒಂದು ಪ್ರಪೋಸಲ್‌ಗೆ ನಾನು ಅಷ್ಟು ಬೇಗ ಒಪ್ಪಿಗೆ ನೀಡಬಾರದು ಎಂಬುವ ಇಂಗಿತವಿತ್ತು. ಆದರೆ ನಾನು ಒಪ್ಪಿಯಾಗಿದೆ. ಬೇರೆ ದಾರಿ ಇಲ್ಲದಿರುವುದು ಮತ್ತು ಅವರೆದುರು ನಮ್ಮ ಚರ್ಚೆ ನಡೆಯುವುದು ಬೇಡವೆಂದು ಮಾರನೇ ದಿವಸ ಭೇಟಿಯಾಗ್ತೀವಿ ಅಂತ ಹೇಳಿ ನನ್ನನ್ನು ದರದರ ಎಳೆದುಕೊಂಡು ಹೋದರು. ಸುಮಾರು ಹೊತ್ತು ಚರ್ಚೆಯ ನಂತರ ಹೊಸಾ ಹುದ್ದೆಗೆ ನಾನು ಹೋಗುವುದನ್ನು – ಅಸೋಸಿಯೇಷನ್‌ನ ಕೆಲಸಕ್ಕೆ ಧಕ್ಕೆ ಆಗದ ರೀತಿಯಲ್ಲಿ ನಡೆಸಬಹುದಾದರೆ ಸರಿ – ಅಂತ ಅವರು ಅರೆ ಮನಸ್ಸಿನಿಂದಲೇ ಒಪ್ಪಿದರು. ಇದರ ಅನುಭವ ಒಂದು ತರಹದಲ್ಲಿ ನನಗೆ ರೋಚಕವಾದದ್ದು. ಅದನ್ನು ಮುಂದೆ ಹೇಳುತ್ತೇನೆ.

ಇದು ಹಾಗಿರಲಿ....

ಅದು ಹೇಗೆ ಅಷ್ಟು ಬೇಗ ಚರ್ಚೆಯೇ ಇಲ್ಲದೇ ನಾನು ಒಪ್ಪಿದೆ ಎಂದು ನೆನೆಸಿಕೊಂಡಾಗ ನನ್ನ ಸಹೋದ್ಯೋಗಿ ನೆನಪಾಗುತ್ತಾರೆ. ನನ್ನ ಮಾನಸಿಕ ಸ್ಥಿತಿಯನ್ನು ರೂಪಿಸುವಲ್ಲಿ ನನ್ನ ಸಹೋದ್ಯೋಗಿಯೊಬ್ಬರು ಅವರಿಗೇ ಗೊತ್ತಿಲ್ಲದ ಹಾಗೆ ಯಾವರೀತಿಯಲ್ಲಿ ಮಾರ್ಗದರ್ಶನವಾದರು ಅಂತ ಈಗಲೂ ನನಗೆ ಆಶ್ಚರ್ಯವಾಗುತ್ತೆ. ಬದುಕಿನಲ್ಲಿ ನಮಗೆ ಅರಿವೇ ಇಲ್ಲದಂತೆ ಸುಮಾರು ಜನ ನಮ್ಮನ್ನು ರೂಪಿಸುತ್ತಾರೆ ! ವರ್ಣ ಮಾತ್ರಂ ಕಲಿಸದಾತನೂ ಗುರುವಾಗುತ್ತಾನೆ – ನನ್ನ ನೆನಪಿನ ಬತ್ತಳಿಕೆಯಲ್ಲಿ ಇಂತಹ ಗುರುಗಳ ಒಂದು ದೊಡ್ಡ ಹೊತ್ತಿಗೆಯೇ ಇದೆ !

✵

---


### ಇದಕ್ಕಿಂತ ನಿಮಗೇನು ಬೇಕು?

ಸಿರಿಯಾ ದೇಶದ ಸರ್ವಾಧಿಕಾರಿ - ಆತನೊಬ್ಬ ನಿರ್ದಯಿ, ಕ್ರೂರಿ - ತನ್ನ ಮರು ಆಯ್ಕೆ ಬಯಸಿ ಚುನಾವಣೆ ನಡೆಸಿದ. ಶೇ. 100ರ ರಷ್ಟು ಮತದಾನ ನಡೆಯಿತು. ಎಣಿಕೆಯ ನಂತರ ಅವನಿಗೆ ಶೇ. 99.7ರ ರಷ್ಟು ಮತಗಳು ಬಿದ್ದಿದ್ದವು.

'ಕೇವಲ ಶೇ. 0.3ರ ರಷ್ಟು ಮಂದಿ ಮಾತ್ರ ನಿಮಗೆ ಮತ ಹಾಕಿಲ್ಲ ಸರ್. ಅಂದರೆ ಸಾವಿರದಲ್ಲಿ ಮೂರು ಮಂದಿ. ಇದಕ್ಕಿಂತ ನಿಮಗೇನು ಬೇಕು?' ಎಂದರು ಅಧಿಕಾರಿಗಳು

'ಅವರ ಹೆಸರುಗಳು' ಎಂದ ಸರ್ವಾಧಿಕಾರಿ.






Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru

SIEMENS
Authorised Hearing Care Centre

Avail **FREE** supply of batteries for a year
on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ** ಇಡಿ.ಡಿ.
**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**

# ಕುಂಬಳಕಾಯಿ ಸಾಕ್ಷ್ಯ

**- ನಾಗೇಶ ಹೆಗಡೆ**

**ಮ**ನೆಯ ಕಡೆ ಕಾರನ್ನು ಓಡಿಸುತ್ತಿದ್ದೆ. ಹೊಲದಂಚಿನ ರಸ್ತೆ ಬದಿಯಲ್ಲಿ ಮುನಿವೆಂಕಟಪ್ಪ ನಡೆದು ಬರುತ್ತಿದ್ದ. ಆತನ ತಲೆಯ ಮೇಲೆ ಒಂದು ಕುಂಬಳಕಾಯಿ ಇತ್ತು. ಅದ್ಯಾಕೊ ಕುಂಬಳಕಾಯಿ ಕಂಡ ತಕ್ಷಣ ನನಗೆ ಬಾಬಾ ನೀಡುತ್ತಿದ್ದ ಭಸ್ಮವೇ ನೆನಪಿಗೆ ಬರುತ್ತದೆ. ಡಾ.ಎಚ್. ನರಸಿಂಹಯ್ಯನವರು ಹಾಕಿದ್ದ ಸವಾಲೂ ನೆನಪಿಗೆ ಬರುತ್ತದೆ. 'ಬಾಬಾಗಳು ಭಸ್ಮ ಕೊಡೋದು, ತಾಯಿತ ಕೊಡೋದು ಸುಲಭ ಕಣ್ರೀ! ಕೈ ಎತ್ತಿ ಒಂದು ಕುಂಬಳಕಾಯಿ ಕೊಡ್ಲಿ, ಆಮೇಲೆ ಒಪ್ಕೊಳ್ಳೋಣ ಅವರ ಪವಾಡಾನ' ಎಂದು ಅವರು ಆಗಾಗ ಹೇಳುತ್ತಿದ್ದುದು ನೆನಪಿಗೆ ಬರುತ್ತದೆ.

ಮುನಿವೆಂಕಟಪ್ಪ ಮನೆಯ ಕಡೆ ಹೆಜ್ಜೆ ಹಾಕುತ್ತಿರಬಹುದು. ಡ್ರಾಪ್ ಬೇಕೇನೊ, ಬರ್ತೀಯೇನೊ ಕೇಳೋಣ ಎಂದುಕೊಂಡೆ. ಆದರೆ ಕಾರಿಗೆ ಬ್ರೇಕ್ ಹಾಕಿದಾಗ ಅದೆಂಥ ಪವಾಡವೊ, ನನ್ನಿಂದ ಬೇರೆಯದೇ ಮಾತು ಹೊರಟಿತು.

'ಏನಯ್ಯ, ಮಾರೋದಕ್ಕಾ?' ಕೇಳಿದೆ.

'ಹೂನ್ರ..... ಬೇಕ್ರಾ?' ತಲೆಯ ಮೇಲಿದ್ದ ಕಾಯನ್ನು ಹೆಗಲಿಗೆ ಇಳಿಸುತ್ತ ಕೇಳಿದ.

'ಬೇಕಿತ್ತು ಆದರೆ ತುಂಬಾ ಜಾಸ್ತಿ ಬೆಳೆದ ಹಾಗಿದೆ' ಎಂದೆ. ಆತ ಹೆಗಲಿನಿಂದ ಅದನ್ನು ಕೈಗೆ ಇಳಿಸಿ ಗುಣಗಾನ ಮಾಡತೊಡಗಿದ. 'ಇಲ್ರ, ಇನ್ನೂ ಎಳಸು. ನಾಟಿ ಕಾಯಿ. ತುಸು ಕುಯ್ದು ತೋರಿಸಲಾ?' ಎಂದ.


'ಸರಿ ಎಷ್ಟು ಕೊಡಬೇಕು?' ಕಾಸಿಗಾಗಿ ಕಿಸೆಗೆ ಕೈಹಾಕುತ್ತ ಕೇಳಿದೆ.

'ಏನ್ ರೇಟು ನಮಗೇನ್ ಗೊತ್ತೈತೆ ಹೇಳಿ.... ನೀವೇ ತಿಳಿದು ಏನಾದ್ರೂ ಕೊಡಿ ವೋಗ್ಲಿ' ಎನ್ನುತ್ತ ಕಾರಿನ ಕಿಟಕಿಯಲ್ಲಿ ಬಾಗಿ ಕುಂಬಳ ಕಾಯಿಯನ್ನು ಸೀಟ್ ಮೇಲೆ ಇಟ್ಟೇಬಿಟ್ಟ.

ನಾನು ಹಣಕ್ಕಾಗಿ ಅಲ್ಲಿ ಇಲ್ಲಿ ತಡಕಾಡಿದೆ. ಐದು ರೂಪಾಯಿಯ ನಾಣ್ಯವೊಂದನ್ನು ಬಿಟ್ಟರೆ ಇಪ್ಪತ್ತು, ಐವತ್ತರ ಒಂದೆರಡು ನೋಟುಗಳಿದ್ದವು. ಇಷ್ಟು ದೊಡ್ಡ ಕುಂಬಳಕಾಯಿಗೆ ಐದು ರೂಪಾಯಿ ತೀರಾ ಕಮ್ಮಿ ಎಂದು ಗೊತ್ತಿತ್ತು. ಹಾಗೆಂದು ಇಪ್ಪತ್ತರ ನೋಟು ಕೊಟ್ಟರೆ ಮನೆಯಲ್ಲಿ ರಣರಂಗ ಆಗುವ ಸಂಭವ ಇತ್ತು. ಆ ಐದರ ನಾಣ್ಯವನ್ನೇ ಅವನಿಗೆ ನೀಡಿದೆ.

ನಿರೀಕ್ಷಿಸಿದಂತೆ ಆತನ ಮುಖಭಾವ ಬದಲಾಯಿತು. ನಾಣ್ಯವನ್ನು ಆಕಡೆ ಈಕಡೆ ತಿರುಗಿಸುತ್ತ ನನ್ನತ್ತ ನೋಡಿದ. ಅಷ್ಟು ಕಮ್ಮಿ ಹಣ ಕೊಟ್ಟಿದ್ದಕ್ಕೆ ನನಗೆ ಅಪರಾಧೀ ಪ್ರಜ್ಞೆ ಕಾಡತೊಡಗಿತ್ತು. ಬೇರೆ ಒಂದೆರಡು ನಾಣ್ಯಗಳಿಗಾಗಿ ಅಲ್ಲಿ ಇಲ್ಲಿ ಹುಡುಕುವ ನಾಟಕವಾಡಿದೆ. ಆತ ಇನ್ನಷ್ಟು ಬಗ್ಗಿ, 'ಚಿಲ್ಲರೆ ಇಲ್ವ್‌ರಾ?' ಎಂದ.





ನಾನು ಕಿಸೆಯಿಂದ ಐವತ್ತರ ನೋಟನ್ನು ಎತ್ತಿ ಅವನತ್ತ ತೋರಿಸಿ 'ಇಲ್ಲಣ್ಣಾ, ಚಿಂತೆ ಮಾಡ್ಕೊಬೇಡ ಮತ್ತೆ ಸಿಕ್ತೀವಲ್ಲ' ಎನ್ನುತ್ತ ಇಗ್ನಿಶನ್ ಕೀ ತಿರುಗಿಸಿದೆ.

'ಇಷ್ಟೂ ಇಟ್ಕೊಳ್ಳೊದ್ರಾ?' ಎಂದು ಆತ ಕೇಳಿದ. ಅವನ ಮುಖದಲ್ಲೂ ಒಂದು ಅಪರಾಧೀ ಪ್ರಜ್ಞೆಯ ಎಳೆ ಕಂಡಂತಾಯಿತು. ಅರ್ಥವಾಗದೆ ಮಿಕಮಿಕ ನೋಡಿದೆ.

'ಬೇಜಾರು ಮಾಡ್ಕಂಬೇಡಿ. ಇನ್ನೊಂದು ಕಾಯಿ ಬೆಳೆದಾಗ ನಿಮ್ಮ ಮನೆಗೇ ತಂದು ಕೊಡ್ತೇನೆ.... ಆಗ ಕಾಸುಗೀಸು ಏನೂ ಬ್ಯಾಡ್ರಾ' ಎಂದ.

ಈಗ ಹೊಳೆಯಿತು. ತನ್ನ ಕುಂಬಳಕಾಯಿಗೆ ಒಂದೋ ಎರಡೋ ರೂಪಾಯಿಗಳನ್ನು ನಿರೀಕ್ಷಿಸಿದ್ದ ಈತನಿಗೆ ಇಡೀ ಐದು ರೂಪಾಯಿ ಸಿಕ್ಕಿತ್ತು. ಆತ ಅಪ್ರತಿಭನಾಗಿದ್ದ.

ನಾನೂ ಅಷ್ಟೆ. 15-20 ರೂಪಾಯಿ ಬೆಲೆ ಬಾಳುವ ಕುಂಬಳಕಾಯಿ ಕೇವಲ ಐದು ರೂಪಾಯಿಗೆ ಸಿಕ್ಕಿದ್ದಕ್ಕೆ ಮನದಲ್ಲೇ ಹಿಗ್ಗಿ ಹೀರೇಕಾಯಿ ಆಗುತ್ತ ಮನೆಗೆ ಬಂದು ಇವಳೆದುರಿಗೆ ಎಲ್ಲವನ್ನೂ ವಿವರಿಸಿದೆ.

ಆದರೆ ಉಲ್ಟಾ ಹೊಡೆಯಿತು. ಈ ಮುನಿವೆಂಕಟಪ್ಪನಿಗೆ ಹೊಲವೇ ಇಲ್ಲವೆಂದೂ, ಯಾವುದೋ ತಿಪ್ಪೆಗುಂಡಿಯಲ್ಲಿ ಬೆಳೆದಿದ್ದ ಅಥವಾ ಯಾರೋ ಬಿಸಾಕಿದ್ದ ಕುಂಬಳಕಾಯಿಯನ್ನು ನನಗೆ ಹೊತ್ತು ಹಾಕಿದನೆಂದೂ ಇವಳು ವಾದಿಸಿದಳು. ಯಾರಿಗೂ ಬೇಡವಾದ ಕುಂಬಳಕಾಯನ್ನು ನನ್ನ ತಲೆಗೆ ಕಟ್ಟಿ, ನಾಡಿದ್ದು ಇನ್ನೇನೋ ಫೇವರ್ ಕೇಳಲು ಬಂದೇ ಬರ್‍ತಾನೆ ನೋಡಿ ಎಂದಳು. ಕುಂಬಳಕಾಯಿಯ ತೊಟ್ಟನ್ನು ಕ್ಲೋಸಪ್‌ನಲ್ಲಿ ಪರೀಕ್ಷೆ ಮಾಡಿ, ಇದು ಎಂದೋ ಕೊಯ್ದಿದ್ದ ಕುಂಬಳಕಾಯಿ ಎಂದು ಸಾಕ್ಷ್ಯಾಧಾರ ಸಮೇತ ತೋರಿಸಿದಳು.

ನಾನು ಪ್ರತಿವಾದ ಮಾಡಿದೆ. ಹೇಗೂ ಇಷ್ಟು ಕಮ್ಮಿ ಬೆಲೆಗೆ ಸಿಕ್ಕಿದ್ದರಿಂದ, ನಿನ್ನ ಯೋಗ ಗುರು ರಾಮದೇವ್ ಆಗಾಗ ಶಿಫಾರಸ್ಸು ಮಾಡುವ ಪ್ರಕಾರ, ದಿನವೂ ಕುಂಬಳಕಾಯಿ ರಸ ಕುಡಿಯೋಣ ಎಂದೆ. ರಾಮದೇವ್ ದಿಲ್ಲಿಯ ರಾಮಲೀಲಾ ಮೈದಾನದ ಪೊಲೀಸ್ ದಾಳಿಯಲ್ಲಿ ಹೆಂಗಸರ ಡ್ರೆಸ್ ತೊಟ್ಟು ಓಡಿದ ಲಾಗಾಯ್ತೂ ಇವಳು ಆ ಚಾನೆಲ್ಲಿಗೇ ಬಹಿಷ್ಕಾರ ಹಾಕಿದ್ದು ಆ ಕ್ಷಣದಲ್ಲಿ ನೆನಪಿಗೇ ಬಂದಿರಲಿಲ್ಲ. ಕುಂಬಳಕಾಯಿ ಇಡಿಯಾಗಿ ನಮ್ಮ ಹಿತ್ತಲಿನ ತಿಪ್ಪೆಗುಂಡಿ ಸೇರಿತು.

ಅದಾಗಿ ಒಂದು ವಾರವೂ ಕಳೆದಿರಲಿಲ್ಲ, ಗೇಟ್ ಸದ್ದಾಯಿತು. ಕಾಫಿ ಎಂದಿನಂತೆ ಭೌ

ಎಂದಿತು. ನೋಡಿದರೆ ಮುನಿವೆಂಕಟಪ್ಪ ತಲೆ ಕೆರೆದುಕೊಳ್ಳುತ್ತ ನಿಂತಿದ್ದ. ಹತ್ತಿರ ಹೋಗಿ ಹುಬ್ಬೇರಿಸಿದೆ.

'ಒಂದು ವುಂಜ ಬೇಕಾಗಿತ್ರ' ಎಂದ.

ಎಲಾ ಇವನ? ಹಿಂದೆಲ್ಲ ತೆಂಗಿನ ಗರಿಯನ್ನೊ, ಕರೀ ಕೆಸುವನ್ನೊ, ಬಾಳೆ ಎಲೆಯನ್ನೊ ಕೇಳುತ್ತಿದ್ದವ (ಒಮ್ಮೊಮ್ಮೆ ಕೇಳದೆ ಕೀಳುತ್ತಿದ್ದವ) ಈಗ ಸೀದಾ ಹುಂಜವನ್ನೇ ಕೇಳುತ್ತಿದ್ದಾನಲ್ಲ!

'ಯಾಕಣ್ಣ ಹುಂಜ? ಪೂಜೆಗಾ?' ಕೇಳಿದೆ.

ಆತ ತಲೆ ಕೆರೆದ. 'ಮನ್ಯಾಗೆ ಮೂರು ಹೆಣ್ಕೋಳಿ ಐದಾವ್ರಾ.... ಮೊಟ್ಟೆ ಮಾಡಿಸಬೇಕಿತ್ತು' ಅಂದ.

ಮಕ್ಕಳನ್ನು ಹೆರಬಲ್ಲ ಬಾಡಿಗೆ ಹೆಂಗಳೆಯರನ್ನು, ಅರ್ಥಾತ್ 'ಸರೊಗೇಟ್ ಮದರ್'ಗಳನ್ನು ಹುಡುಕುತ್ತ ವಿದೇಶೀಯರು ಭಾರತಕ್ಕೆ ಬರುತ್ತಾರೆಂಬುದು ನಮಗೆ ಗೊತ್ತು. ಈ ಮುನಿಗೆ ಬಾಡಿಗೆ ಹುಂಜ ಬೇಕಂತೆ. ಅಮೆರಿಕದ ಮಹಿಳೆಯರಿಗೆ ಗೊತ್ತಾದರೆ ಅಲ್ಲೊಂದು ಹೊಸ ಸಂಪ್ರದಾಯವೇ ಆರಂಭವಾಗಬಹುದು. ಬಾಡಿಗೆ ಬಸುರಿಯರಿಗಾಗಿ ಹುಡುಕುತ್ತ ಇಂಡಿಯಾಕ್ಕೆ ಬರುವ ಬದಲು, ಬಾಡಿಗೆ ಗಂಡಸರನ್ನೇ ಇಲ್ಲಿಂದ ಔಟ್‌ಸೋರ್ಸಿಂಗ್ ಮಾಡುವ ಬಗ್ಗೆ ಭಾರತ ಸರಕಾರದೊಂದಿಗೆ ಎಮ್ಮೋಯು ಮಾಡಿಕೊಳ್ಳಲು ಒತ್ತಾಯಿಸಬಹುದು.

'ಏನಾಯ್ತೊ ನಿನ್ನ ಕೆಂಪು ಹುಂಜ?' ಎಂದು ಕೇಳಿದೆ. ಉತ್ತರ ನನಗೂ ಗೊತ್ತಿತ್ತು. ಊರಹಬ್ಬಕ್ಕೆ ಬಂದ ಅಳಿಯನಿಗಾಗಿ ಪಾರ್ಟಿ ಮಾಡಿರಬೇಕು. ಈಗ ಹೆಣ್ಣುಕೋಳಿಗಳೆಲ್ಲ ಅನಾಥವಾಗಿವೆ.

ನಾನೇ ದಬಾಯಿಸಿದೆ: 'ಅಲ್ಲಯ್ಯಾ! ಕುಯ್ಕೊಂಡು ತಿನ್ನೋದೇ ಆದ್ರೆ ಹುಂಜಾನ್ನ ಯಾಕಯ್ಯ ಬಲಿ ಹಾಕ್ತೀರ? ಯಾವುದಾದರೂ ಹೆಣ್ಣು ಕೋಳಿ ಸಿಗೋದಿಲ್ವ?' ಕೇಳಿದೆ.

'ಮೊಟ್ಟೆ ಇಡೋ ಕೋಳೀನ್ನ ಕೊಯ್ಯೋಕೆ ಮನೆಯವರು ಬಿಡಾಕಿಲ್ಲ ಸೋಮಿ' ಅಂದ ಮುನಿವೆಂಕಟಪ್ಪ

ಇವನ ವ್ಯವಹಾರವೆಲ್ಲ ಹೀಗೇ.

'ನಿನಗೆ ಹುಂಜವನ್ನು ಕೊಟ್ಟರೆ ನಮ್ಮ ಕೋಳಿಗಳು ಬಂಜೆ ಆಗುತ್ತವಲ್ಲ? ಅದಕ್ಕೇನು ಮಾಡುವುದು?' ಕೇಳಿದೆ.

'ನಾಕ್ ದಿನ ಅಷ್ಟೆ; ಆಮೇಲೆ ತಂದ್ಕೊಡ್ತೀನಿ' ಎಂದ ಮುನಿವೆಂಕಟಪ್ಪ.

'ಆ ಮಧ್ಯೆ ನಿನ್ನ ಅಳಿಯ ಮತ್ತೆ ಬಂದರೆ....?' ಕೇಳಿದೆ.

ನನ್ನ ದಿಗಿಲು ಅವನಿಗೆ ಅರ್ಥವಾಯ್ತೆಂದು ಕಾಣುತ್ತದೆ. 'ಸರಿ, ಆಮ್ಯಾಕೆ ನೋಡನ್ರಾ' ಎಂದು ಮಾತನ್ನು ಅರ್ಧಕ್ಕೆ ಮೊಟಕು ಮಾಡಿ ಹಿಂದಕ್ಕೆ ಹೆಜ್ಜೆ ಹಾಕಿ ಹೊರಟೇ ಹೋದ. ಯಾಕಪ್ಪಾ ಇಷ್ಟು ಅವಸರದಲ್ಲಿ ಹೊರಟನೆಂದು ಅಚ್ಚರಿಪಡುತ್ತ ಹಿಂದಕ್ಕೆ ತಿರುಗಿದರೆ, ಹಿಂದೆಯೇ ನಿಂತಿದ್ದಳು ನಮ್ಮ ಮನೆಯ ಹೋಮ್ ಮೇಕರ್.



ಹುರುಳಿ ಕಟ್ಟು...

# ಮಾಸ್ತಿ ಅಜ್ಜನ ಹಿರಿತನ.......

- ಎಚ್. ಗೋಪಾಲಕೃಷ್ಣ

**ಆ**ಗ ತಾನೇ ಹೈಸ್ಕೂಲು ಮುಗಿಸಿ ಕಾಲೇಜಿಗೆ ಸೇರಿದ್ದೆ. ಸೈಕಲ್ಲಿನ ಮೇಲೆ ಕಾಲೇಜಿಗೆ ಹೋಗಿದ್ದವನು ವಾಪಸ್ಸು ಬಂದನಂತರ ಸೈಕಲ್ಲನ್ನು ಗೋಡೆಗೆ ಒರಗಿಸಿ ಆಡಲು ಹೋಗಿದ್ದೆ. ಮೂರುವರ್ಷ ವಯಸ್ಸಿನ ನಮ್ಮಣ್ಣನ ಮಗ ಈ ಸೈಕಲ್ಲನ್ನು ಹತ್ತಲು ಹೋಗಿ ಅದು ಅವನ ತೊಡೆ ಮೇಲೆ ಬಿದ್ದು ತೊಡೆ ಮೂಳೆ ಮುರೀತು. ಮೂಳೆ ರಿಪೇರಿಯಾಗಲು ಮೂರ್ನಾಲ್ಕು ತಿಂಗಳು ಹಿಡೀತು. ಮಗುವಿನ ಕಾಲಿನ ಪ್ಲಾಸ್ಟರ್ ಬಿಚ್ಚಿದ ನಂತರ ಅದನ್ನು ಹೊರಗಡೆ ಸುತ್ತಾಡಿಸಲು ಕರೆದುಕೊಂಡು ಬಸವನಗುಡಿಗೆ ಹೋಗಿದ್ದೆವು.

ಸುತ್ತಾಡುತ್ತಿರಬೇಕಾದರೆ ನಮ್ಮಣ್ಣ ಅಲ್ಲಿ ಒಂದು ದೇವಸ್ಥಾನದ ಮುಂದೆ ಬರಿ ಮಡಿ ಪಂಚೆಯನ್ನುಟ್ಟು ಮೈಗೆಲ್ಲಾ ನಾಮ ಧರಿಸಿ ಬೆವರು ಒರೆಸಿಕೊಳ್ಳುತ್ತಾ ಕುಳಿತಿದ್ದ ವೃದ್ಧರನ್ನು ತೋರಿಸಿ ನೋಡು ಅವರೇ ಮಾಸ್ತಿ ಅಂದರು. ಅವರ ಸುಮಾರು ಕಥೆಗಳನ್ನು ಆಗಲೇ ಓದಿದ್ದೆ ಮತ್ತು ಮನೆಯಲ್ಲಿ ಸಾಹಿತ್ಯದ ಮಾತು ಬಂದಾಗಲೆಲ್ಲಾ ನಮ್ಮಮ್ಮ ಮರೆಯದೇ ಮಾಸ್ತಿಯವರ ಯಾವುದಾದರೂ ಕಥೆಯನ್ನು ನೆನೆಸಿಕೊಂಡು ಹೇಳುತ್ತಿದ್ದರು. ಅಂತಹ ಮಾಸ್ತಿ ಹೊರಗಡೆ ಒಬ್ಬರೇ ಕುಳಿತಿದ್ದಾರೆ, ಯಾರೂ ಅವರ ಜತೆ ಇಲ್ಲ, ಅವರನ್ನ ಮಾತನಾಡಿಸಬೇಕು ಅಂತ ಆ ಕ್ಷಣದಲ್ಲಿ ಅನಿಸಿಬಿಟ್ಟಿತು. ಮಗುವನ್ನೂ ಕರೆದುಕೊಂಡು ಅವರೆದುರು ಹೋದೆವು. ನಮಸ್ಕಾರ ಸಾರ್ ಎಂದೆವು. ಮಾಸ್ತಿ ತಾತ ಬನ್ನಿ, ನೀವು ಯಾರೋ ಗೊತ್ತಾಗಲಿಲ್ಲ... ಅಂದರು. ನಮ್ಮ ಪ್ರವರ ಹೇಳಿಕೊಂಡೆವು ಮತ್ತು ನಮ್ಮಣ್ಣನ ಮಗನನ್ನು ತೋರಿಸಿ ಅವನು ಕಾಲು ಮುರಿದುಕೊಂಡಿದ್ದ ಸಂಗತಿ ವಿವರಿಸಿದೆವು. ಮಾಸ್ತಿಯವರು ಮಗುವನ್ನೆತ್ತಿ ಅವರ ತೊಡೆಮೇಲೆ ಕೂರಿಸಿಕೊಂಡರು, ಮುದ್ದಿಸಿದರು. ಮಕ್ಕಳು ಚೇಷ್ಟೆ ಮಾಡುತ್ತವೆ ಅಂತ ಅದನ್ನ ಬೈಯಬಾರದು, ಮಕ್ಕಳು ಅಂದರೆ ದೇವರಿದ್ದ ಹಾಗೆ ಅಂತ ಮತ್ತೆ ಮುದ್ದಿಸಿದರು. ಮಗು ಹಲ್ಲು ಸಾಲುಸಾಲಾಗಿ ಚೆನ್ನಾಗಿದೆ, ಅದಕ್ಕೆ ಏಳು ವರ್ಷಕ್ಕೆ ಹಲ್ಲು ಬೀಳುತ್ತಲ್ಲಾ ಆಗ ನಾಲಿಗೆಯಿಂದ ಹಲ್ಲು ಮುಂದೆ ದೂಡದ ಹಾಗೆ ನೋಡಿಕೊಳ್ಳಿ ಅಂದರು. ನಿಮ್ಮದು ಯಾವೂರು, ಎಲ್ಲಿ ಕೆಲಸ ಮಾಡ್ತೀರೀ ಅಂತ ನಮ್ಮ ಅಣ್ಣನನ್ನೂ ಏನು ಓದ್ತಿದೀರೀ ನೀವು ಯಾವ ಕಾಲೇಜು ಅಂತ ನನ್ನನ್ನೂ ಬಾಯಿ ತುಂಬಾ ವಿಚಾರಿಸಿದರು. ನಡುನಡುವೆ ಒಂದೆರೆಡು ತಮಾಷೆ ಮಾತೂ ಆಡಿದರು. ಅವರ ಸಂಗಡ ಅದೂ ಇದೂ ಮಾತನಾಡಿ ಬರ್ತೀವಿ ಅಂತ ಮೇಲೆ ಎದ್ದೆವು. ಇರಿ ಅಪ್ಪಾ ಪ್ರಸಾದ ಬರುತ್ತೆ, ತಿಂದುಕೊಂಡು ಹೋಗಿವ್ರಂತೆ... ಒಳಗಡೆ ಸೆಖೆ ಅಂತ ನಾನು ಆಚೆ ಬಂದು ಕೂತ್ಕೊಂಡೆ.... ಅಂತ ನಿಲ್ಲಿಸಿಕೊಂಡರು. ಒಳಗಡೆ ಪೂಜೆ ಮುಗೀತು ಅಂತ ಕಾಣುತ್ತೆ. ಮಹಾಮಂಗಳಾರತಿ ಆಯಿತು, ಗಂಟೆಗಳ ಶಬ್ದವೂ ಕೇಳಿಸಿತು. ಮಾಸ್ತಿಯವರು ಕೂತಕಡೆಯೇ ಎದ್ದು ನಿಂತು ದೇವರಗುಡಿಯ ಬಾಗಿಲಿಗೆ ಕೈ ಮುಗಿದರು.

ಮಾಸ್ತಿಯವರ ಮನೆಯವರು (ಅವರ ಮಗಳಿರಬೇಕು) ಒಂದು ದೊಡ್ಡ ಕಂಚಿನ ಪಾತ್ರೆಯಲ್ಲಿ ಪ್ರಸಾದವನ್ನು ಆಚೆ ತಂದರು. ಮೊದಲು ಪ್ರಸಾದವನ್ನು ಕುಟುಂಬದ ಹಿರಿಯ

ಮಾಸ್ತಿಯವರಿಗೆ ನೀಡಿ ನಂತರ ಅದನ್ನು ಒಳಗಿರುವ ಮನೆಯ ಮಿಕ್ಕವರಿಗೆ ಹಂಚಲು ತಂದಿದ್ದರು. ಪಾತ್ರೆ ತುಂಬಾ ಪೊಂಗಲ್ ಪ್ರಸಾದ ಆಚೆ ಇಣುಕುತ್ತಿತ್ತು. ಅದರ ಘಮಘಮ ಆಹಾ ಕೇಳಬೇಡಿ... ಅವರ ಜತೆಗೆ ಮತ್ತೊಬ್ಬರು ಮುತ್ತುಗದ ಎಲೆಯನ್ನು ಹಿಡಿದುಕೊಂಡಿದ್ದರು – ಪ್ರಸಾದ ಹಂಚಲು. ಮಾಸ್ತಿಯವರ ಮುಂದೆ ಪ್ರಸಾದ ಹಿಡಿದವರು ಬಂದು ಅವರ ಕೈಗೆ ಎಲೆಯನ್ನು ಕೊಡಲು ಹೋದರು. ಮಾಸ್ತಿಯವರು ನಮ್ಮನ್ನು ತೋರಿಸಿ ಮೊದಲು ಅವರಿಗೆ ನೀಡು ತಾಯಿ, ಮಗೂಗೆ ಕೊಡು, ಅವರ ತಂದೆಗೆ ಕೊಡು, ಅವರ ಚಿಕ್ಕಪ್ಪನಿಗೆ ಕೊಡು.. ಹೀಗೆ ನಿರ್ದೇಶನ ನೀಡುತ್ತಾ ನಮಗೆ ನೀಡಲು ಒತ್ತಾಯಿಸಿದರು.

ಸಾರ್ ನೀವು ಹಿರಿಯರು, ನೀವು ಮೊದಲು ತೆಗೆದುಕೊಳ್ಳಿ..... ಅಂದ ನಮ್ಮಣ್ಣ.

ಮಾಸ್ತಿಯವರ ಬಲವಂತ ಹೆಚ್ಚಾಯಿತು. ನೀವು ನಮ್ಮ ಅತಿಥಿಗಳು ಮಗೂಬೇರೆ ಬಂದಿದೆ, ನೀವು ಮೊದಲು ತಗೋಬೇಕಪ್ಪಾ.... ಅಂತ ಬಲವಂತ ಪಡಿಸಿ ನಮ್ಮ ಕೈಗೆ ಮುತ್ತುಗದ ಎಲೆ ಕೊಟ್ಟುಪ್ರಸಾದ ನಮಗೇ ಮೊದಲು ನೀಡಿಸಿದರು. ನಂತರ ಅವರು ಎಲೆ ಮೇಲೆ ಸ್ವಲ್ಪವೇ ಸ್ವಲ್ಪ ಹಾಕಿಸಿಕೊಂಡು ಮೂರು ಬೆರಳಿನಲ್ಲಿ ಬಾಯಿಗೆ ಹಾಕಿಕೊಂಡರು.

ಪ್ರಸಾದ ತಿಂದೆವು – ಮೊಟ್ಟಮೊದಲಬಾರಿಗೆ ಐಯ್ಯಂಗಾರ್ಯರ ಮನೆಯ ಪೊಂಗಲ್ ಪ್ರಸಾದದ ರುಚಿ ನೋಡಿದ್ದೆವು, ಇನ್ನೊಂದು ಸ್ವಲ್ಪ ಕೇಳಿ ತಿಂದುಬಿಡೋಣಾ ಅಂತ ಅನಿಸಿದ್ದರೂ ಪಾತ್ರೆ ಒಳಗೆ ಹೋಗಿದ್ದು ಇನ್ನೂ ಆಚೆ ಬಂದಿರಲಿಲ್ಲ, ಎಲೆ ಎಲ್ಲಿ ಬಿಸಾಡೋದೂ ಅಂತ ಅತ್ತ ಇತ್ತ ನೋಡುತ್ತಿದ್ದಾಗ ಮಾಸ್ತಿಯವರು ಅಲ್ಲೇ ಮೂಲೆಯಲ್ಲಿ ಹಾಕಿಬಿಡಿ ಅಂದರು. ನಗುತ್ತಾ ಕೈ ತೊಳೆದುಕೊಳ್ಳಬಾರದು ಪ್ರಸಾದ ತಿಂದಮೆಲೆ ಗೊತ್ತಾ? ಪುಣ್ಯ ಹೋಗಿಬಿಡುತ್ತಂತೆ,ಅದಕ್ಕೇ ಪ್ರಸಾದ ತಿಂದಮೇಲೆ ದೇವಸ್ಥಾನದ ಕಂಬಗಳಿಗೆ ಕೈ ಒರೆಸಿಬಿಡುತ್ತಾರೆ..... ಹಂಗಾಗೇ ಕಂಬಮೇ ತಣ್ಣೇ ಅನ್ನೋ ಮಾತು ಹುಟ್ಟಿದ್ದು... ಅಂತ ಹೇಳಿ ಅವರದೇ ಮೋಹಕ ನಗೆಯನ್ನು ಚೆಲ್ಲಿದರು.

ಇದು ನಡೆದು ಆಗಲೇ ನಲವತ್ತಕ್ಕೂ ಹೆಚ್ಚು ವರ್ಷಗಳಾಗಿವೆ. ಈಗಲೂ ನನ್ನ ಮನಸ್ಸಿನ ಮುಂದೆ ಮಾಸ್ತಿಯವರ ಮುಗ್ಧ ನಗು, ದೇವಸ್ಥಾನದ ಮುಂದೆ ಬರೀ ಮಡಿಪಂಚೆಯನ್ನುಟ್ಟು ತ್ರಿಪುಂಡ್ರ ಧರಿಸಿ ಅವರು ಕೂತ ರೀತಿ, ಅವೆಲ್ಲವುಗಳಿಗಿಂತಲೂ ಹೆಚ್ಚಾಗಿ ನಮ್ಮನ್ನು ಅವರು ಪ್ರೀತಿಯಿಂದ ನಡೆಸಿಕೊಂಡ ರೀತಿ ಕಣ್ಣಿಗೆ ಕಟ್ಟಿದ ಹಾಗಿದೆ. ನಮ್ಮನ್ನು ಎಂದೂ ನೋಡಿಯೇ ಇರದ, ಅವರ ಸಂಸಾರದ ದೂರದ ಒಂದು ಚೂರಿನವರೂ ಆಗದ ನಮಗೆ, ನಮ್ಮ ಕುಲ ಗೋತ್ರವನ್ನೇ ಅರಿಯದೇ, ಅವರು ಅವರ ಮನೆಯವರಿಗಿಂತಲೂ ಹೆಚ್ಚಾಗಿ ಮೊದಲು ಪ್ರಸಾದ ನೀಡಿಸಿದ್ದು ಈಗಲೂ ನನಗೆ ತಬ್ಬಿಬ್ಬು ಮಾಡುತ್ತೆ. ಅವರ ಹೃದಯವಂತಿಕೆಯ ಬಗ್ಗೆ ಮತ್ತು ಅವರ ಜೀವನ ವಿಧಾನದ ಬಗ್ಗೆ ಆದರ ಮೂಡಿಸುತ್ತದೆ.

ಹಿರಿಯಜ್ಜ, ಮೇಧಾವಿ ಇವರ ಸಮಯವನ್ನು ನಾವು ಹಾಳು ಮಾಡ್ತಿದೀವಾ ಅನ್ನುವ ಹಿಂಜರಿಕೆಯೇ ಇಲ್ಲದೇ ಅವರ ಪಕ್ಕದಲ್ಲಿ ಅವರಿಗೆ ಸರಿಸಮಾನರಾಗಿ ಕೂತು ಕಳೆದ ಆ ಹಲವು ನಿಮಿಷಗಳು ಇಷ್ಟು ವರ್ಷಗಳ ನಂತರವೂ ನೆನೆಪಿನಲ್ಲಿರುವುದು ಅವರ ದೊಡ್ಡತನದ ದ್ಯೋತಕ ಎಂದು ನನ್ನ ಅನಿಸಿಕೆ. ಬಹುಶಃ ಮಾಸ್ತಿ ಕನ್ನಡದ ಆಸ್ತಿ, ದೊಡ್ಡ ಆಸ್ತಿಯಾಗಲು ಅವರ ಈ ನಿರ್ಮಲ ಸ್ವಭಾವವೂ ಕಾರಣ!